**ಶ್ರೀ ಜಗದೀಶ್ ಶೆಟ್ಟರ್** : ನಮಗೆ ಎಲ್ಲಿಯವರೆಗೆ ಉತ್ತರ ಬರುವುದಿಲ್ಲ, ಅಲ್ಲಿಯವರೆವಿಗೆ ನಾವು ಧರಣಿ ಮಾಡುತ್ತೇವೆ.

**ಅಧ್ಯಕ್ಷರು** : ಶೆಟ್ಟರೆ, ದಯವಿಟ್ಟು ಕುಳಿತುಕೊಳ್ಳಿ ಸ್ವಲ್ಪ, ಈಗ ನೀವು ಕೊಟ್ಟಂಥ ಸಲಹೆ ಮೇರೆಗೆ ಮತ್ತೊಂದು ಸಾರಿ ತಿದ್ದುಪಡಿಯನ್ನು ತರುತ್ತೇವೆಂದು ಹೇಳಿದ್ದಾರೆ. ತಂದಾಗ ಇಲ್ಲಿ ಚರ್ಚೆಗೆ ಬರುತ್ತದೆ. ಆಗ ನೀವು ಏನು ಅಭಿಪ್ರಾಯ ಕೊಡಬೇಕೋ ಏನು ತೀರ್ಮಾನ ಮಾಡುತ್ತಾರೋ ಮಾಡಲಿ. ಈಗ ಬೇರೆ ಕಾರ್ಯಕ್ರಮವನ್ನು ಪೂರೈಸಿಕೊಳ್ಳೋಣ. ದಯವಿಟ್ಟು, ಅವರು ಬಿಲ್ ಅನ್ನು ತಂದಿಟ್ಟಾಗ ಮತ್ತೆ ಮಾತನಾಡುವುದಕ್ಕೆ ಪೂರ್ಣ ಅವಕಾಶವಿದೆ. ನಾನು ಶೆಟ್ಟರು ಅಲ್ಲಿ ಹೇಳಿದ್ದಾರೆ. ಅದಕ್ಕೋಸ್ಕರ ಈಗ ನಾನು ಹೇಳಿದ್ದೇನೆ. ಅವರು ಪುನಃ ತಿದ್ದುಪಡಿಯಾಗಿ ಒಂದು ಕರಡನ್ನು ತರುತ್ತಾರೆ. ಅದು ಚರ್ಚೆಗೆ ಈ ಸದನದಲ್ಲಿ ಬರುತ್ತದೆ. ಆ ಸಂದರ್ಭದಲ್ಲಿ ನಿಮ್ಮ ಅಭಿಪ್ರಾಯಗಳು ಯಾವ ರೀತಿ ಇದೆ ಎಂದು ಹೇಳುವುದಕ್ಕೆ ಅವಕಾಶವಿದೆ. ಅವರು ಹೇಳಿದ್ದು ಸರಿಯಿದ್ದರೆ ನೀವು ಒಪ್ಪಿಕೊಳ್ಳಿ. ಇಲ್ಲದಿದ್ದರೆ ನಿಮ್ಮ ತೀರ್ಮಾನಕ್ಕೆ ಬಿಟ್ಟಿರುವಂಥ ವಿಚಾರ. ದಯವಿಟ್ಟು ಈಗ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಅವಕಾಶ ಮಾಡಿ ಕೊಡಿ. ದಯವಿಟ್ಟು, ಆಮೇಲೆ ನಿಧಾನಕ್ಕೆ ಬರುತ್ತದೆ. ಕ್ಷಮಿಸಿ ಬಿಡಿ.

(ಗೊಂದಲ)

**ಅಧ್ಯಕ್ಷರು** : ಆಯಿತು, ಆಯಿತು, Thank you, very good, ಬನ್ನಿ.

(ಈ ಹಂತದಲ್ಲಿ ಸದನದ ಬಾವಿಯೊಳಗೆ ಧರಣಿಗೆ ಬಂದಿದ್ದಂಥ ಸದಸ್ಯರೆಲ್ಲರೂ ತಮ್ಮ ತಮ್ಮ ಆಸನಗಳಿಗೆ ಮರಳಿದರು)

**ಅಧ್ಯಕ್ಷರು** : ಬಿ.ಆರ್.ಪಾಟೀಲ್, ನೋಡಿ ಹತ್ತತ್ತೇ ನಿಮಿಷ. ಬೇಗ ಬೇಗ....

**6. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ.**

**ಶ್ರೀ ಬಿ.ಆರ್.ಪಾಟೀಲ್ (ಆಳಂದ)**: ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಂಥ ತಮಗೆ ವಂದನೆಗಳನ್ನು ಸಲ್ಲಿಸುತ್ತಾ, ಇವತ್ತು ರಾಜ್ಯಪಾಲರು ಈ ಸರ್ಕಾರದ ಮುಂದಿನ

ದಿಕ್ಕನ್ನು ಮತ್ತು ಅವರ ದಿಶೆಯನ್ನು ವಿವರವಾಗಿ ತಮ್ಮ ಮಾತಿನಲ್ಲಿ ಹೇಳಿದ್ದಾರೆ. ಈಗಾಗಲೇ ಇದರ ಬಗ್ಗೆ ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ಯಾವ ವಿಷಯವನ್ನು ಯಾರೂ ಮಾತನಾಡಿಲ್ಲ, ಅಂಥ ವಿಷಯದ ಬಗ್ಗೆ ಮಾತ್ರ ನಾನು ಪ್ರಸ್ತಾಪ ಮಾಡಿ ನನ್ನ ಮಾತನ್ನು ತಮ್ಮ ಎದುರಿಗಿಡುತ್ತಿದ್ದೇನೆ. ಇವತ್ತು ಹೊಸ ಸರ್ಕಾರ ಈ ರಾಜ್ಯದಲ್ಲಿ ಒಂದು ವಿಭಿನ್ನ ರೀತಿಯಲ್ಲಿ ಬದಲಾವಣೆ ತರಬೇಕು, ಈ ರಾಜ್ಯವನ್ನು ಅಭಿವೃದ್ಧಿ ಪಡಿಸಬೇಕು. ಎಲ್ಲಾ ರಂಗಗಳಲ್ಲೂ ಕೂಡಾ ಒಂದು ಬದಲಾವಣೆ ತರಬೇಕೆನ್ನುವ ಉದ್ದೇಶದಿಂದ ಅನೇಕ ವಿಚಾರಗಳನ್ನು ರಾಜ್ಯಪಾಲರ ಬಾಯಿಯಿಂದ ಹೇಳಿಸಿದ್ದಾರೆ. ಬಹಳ ಸಂತೋಷ, ಇವತ್ತು ಆಕಸ್ಮಿಕವೋ ಏನೋ ಗೊತ್ತಿಲ್ಲ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಒಂದು ತಿದ್ದುಪಡಿಯನ್ನು ಕೂಡಾ ತಂದಿದ್ದಾರೆ. ಅದರ ಬಗ್ಗೆ ಕೂಡಾ ನನ್ನದೇ ಆದ ಕೆಲವು ವಿಚಾರಗಳನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತೇನು 73ನೇ ತಿದ್ದುಪಡಿಯನ್ನು ಮಾನ್ಯ ರಾಜೀವ್ ಗಾಂಧಿಯವರು ಸಂವಿಧಾನಕ್ಕೆ ತಂದು ಇಡೀ ರಾಷ್ಟ್ರದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಬರಬೇಕು, ಸಮಾಜದ ಕಟ್ಟ ಕಡೆಯ ಮನುಷ್ಯನಿಗೆ ಕೂಡಾ ಈ ಒಂದು ಅಭಿವೃದ್ಧಿಯ ಲಾಭ ಮುಟ್ಟಬೇಕು, ಮಹಾತ್ಮ ಗಾಂಧೀಜಿಯವರು ಕಂಡಂಥ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು, ಇವತ್ತು ಇಂಥ ಒಂದು ಕಾನೂನನ್ನು ತಂದರು. ಆದರೆ, ಈ ಕಾನೂನು ಅನುಷ್ಠಾನವಾದ ಮೇಲೆ, ಇದರಲ್ಲಿ ಅನೇಕ ನ್ಯೂನತೆಗಳನ್ನು, ಏರುಪೇರುಗಳನ್ನು ನಾವು ಅನುಭವಿಸಿದ್ದೇವೆ ಮತ್ತು ಅದನ್ನು ಕಂಡಿದ್ದೇವೆ. ಇವತ್ತು ಇಡೀ ನಮ್ಮ ದೇಶದಲ್ಲಿರುವಂಥ ಬಹಳ ದೊಡ್ಡ ಸಮಸ್ಯೆಯೇನೆಂದರೆ ಈ ಪರಿಸರದ ಒಂದು ದೊಡ್ಡ ಸಮಸ್ಯೆ. ಪರಿಸರದಲ್ಲಿ ಸಮತೋಲನವಿಲ್ಲ, ಈ ಪರಿಸರದ ಬಗ್ಗೆ ಜಾಗತಿಕ ಮಟ್ಟದಿಂದ ಹಿಡಿದು ರಾಷ್ಟ್ರ ಮಟ್ಟದವರೆಗೂ ಅನೇಕ ಪರಿಸರವಾದಿಗಳು, ತಜ್ಞರು ಅನೇಕ ವಿಚಾರಗಳನ್ನು ಚರ್ಚೆ ಮಾಡುತ್ತಿದ್ದಾರೆ ಮತ್ತು ಈ ಭೂಮಿಯನ್ನು ಯಾವ ತರಹ ಉಳಿಸಬೇಕು ಎನ್ನುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ. Global warming ಬಗ್ಗೆ ಬಹಳ ಎಚ್ಚರಿಕೆ ಗಂಟೆಯನ್ನು ನಮ್ಮ ಅನೇಕ ವಿಜ್ಞಾನಿಗಳು, ತಜ್ಞರು ಕೊಟ್ಟಿದ್ದಾರೆ. ಇದರ ಬಗ್ಗೆ ಬಹಳಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಈ ಸಮಸ್ಯೆಯಿಂದ ಹೇಗೆ ಪಾರಾಗಬೇಕು? ನಿನ್ನೆ ಮಾನ್ಯ

ರಮೇಶ್‌ಕುಮಾರ್‌ರವರು ಮತ್ತು ಈ ಭಾಗದ ಕೋಲಾರ, ಚಿಕ್ಕಬಳ್ಳಾಪುರದ ಜನ ಈ ಒಂದು ಬರದ ಸಮಸ್ಯೆ ಮತ್ತು ನೀರಿನ ಸಮಸ್ಯೆ ಬಗ್ಗೆ ತಾವು ಅವಕಾಶ ಮಾಡಿಕೊಟ್ಟಂಥ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ಹೊರ ಹಾಕಿದ್ದಾರೆ. ಮಾನ್ಯ ಅಧ್ಯಕ್ಷರೆ, ಇವತ್ತು ಬರ, ರಾಜ್ಯ ಸರ್ಕಾರ ಕೂಡಾ ಕುಡಿಯುವ ನೀರಿಗೋಸ್ಕರ ಬಹಳಷ್ಟು ದುಡ್ಡು ಖರ್ಚು ಮಾಡುತ್ತಿದೆ. ಇವತ್ತು ಪ್ರತಿ ವರ್ಷ ಪ್ರತಿ ಬೇಸಿಗೆಯಲ್ಲಿ ಈ ಒಂದು ಸಮಸ್ಯೆ ಕಡೆಗೆ ಸರ್ಕಾರ ನಿರಂತರವಾಗಿ ಪ್ರಯತ್ನ ಮಾಡಿಕೊಂಡು ಬಂದಿದೆ. ಆದರೂ, ಇವತ್ತು ನೀರಿನ ಸಮಸ್ಯೆ ಎಷ್ಟು ಭಯಾನಕವಾಗಿದೆ, ಎಷ್ಟು ಗಂಭೀರವಾಗಿದೆಯೆಂದರೆ ಯಾವುದೇ ಸರ್ಕಾರಗಳು ಅಧಿಕಾರದಲ್ಲಿ ಬಂದರೂ ಕೂಡಾ ಈ ಸಮಸ್ಯೆಯನ್ನು ಪರಿಹರಿಸಲಾರದಷ್ಟು ಗಂಭೀರ ಪರಿಸ್ಥಿತಿ ನಮ್ಮಲ್ಲಿ ಬಂದಿದೆ. ಇದಕ್ಕೆ ಕಾರಣಗಳೇನು? ಕಾವೇರಿ ವಿಷಯದ ಬಗ್ಗೆ ಸಹ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅನೇಕರು ಮಾತನಾಡಿದರು. ಕಾವೇರಿಯಲ್ಲಿ ಮಳೆ ಬರುತ್ತಿಲ್ಲ, ನೀರು ಬರುತ್ತಿಲ್ಲ, ಹಾಗಾಗಿ ಕರ್ನಾಟಕದ ಜನರಿಗೆ ಅನ್ಯಾಯವಾಗುತ್ತಿದೆ, ತೊಂದರೆಯಾಗುತ್ತಿದೆ. ಇದರ ಬಗ್ಗೆ ಸಹ ಪರಿಸರವಾದಿಗಳು ಬಹಳ ಮಹತ್ವವಾದ ಒಂದು ವಿಚಾರವನ್ನು ಹೇಳಿದ್ದಾರೆ. ಏನೆಂದರೆ, ಕಾವೇರಿ ಕಣಿವೆಯಲ್ಲಿ ಮರಗಳನ್ನು ಕಡಿದು ಹಾಕಿ ಅರಣ್ಯವನ್ನು ನಾಶ ಮಾಡುವ ಕೆಲಸವಾಯಿತು. ಆ ಕಾರಣಕ್ಕಾಗಿ ಮಳೆ ಬರುತ್ತಿಲ್ಲ. ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆನ್ನುವಂಥ ಮಾತನ್ನು ನಮ್ಮ ಪರಿಸರವಾದಿಗಳು ಹೇಳಿದ್ದಾರೆ.

**ಅಧ್ಯಕ್ಷರು** : ಎಲ್ಲಿದ್ದಾರೆ ಅವರು? ಪರಿಸರವಾದಿಗಳು ಎಲ್ಲಿ ವಾಸ ಮಾಡುತ್ತಾರೆ? ಯಾರು ಈ ಪರಿಸರವಾದಿಗಳು?

**ಶ್ರೀ ಬಿ.ಆರ್.ಪಾಟೀಲ್** : ಸುರೇಶ್ ಹೆಬ್ಬೀಕರ್‌ರಂಥ ಪರಿಸರವಾದಿ activist, ಅವರು ಬೆಂಗಳೂರಿನಲ್ಲಿ ವಾಸ ಮಾಡಿದರೂ ಸಹ ಚಿಂತನೆ ಮತ್ತು ಈ ರೀತಿಯ ವಿಚಾರ ಅವರೇ ಮಾಡಬೇಕೆಂದೇನೂ ಇಲ್ಲ. ಬೇರೆ ಬೇರೆ ಭಾಗದ ಜನ ಸಹ ಅದರ ಬಗ್ಗೆ ಕಾಳಜಿ ಮತ್ತು ಚಿಂತನೆ ಮಾಡಿದರೆ ತಪ್ಪೇನಿಲ್ಲ. ಇವತ್ತು ನೀರಿನ ಸಮಸ್ಯೆ ಎಷ್ಟು ಗಂಭೀರವಾಗಿದೆಯೆಂದರೆ ನಮ್ಮ ಮಿತಿ ಮೀರಿ ಹೋಗುತ್ತಿದೆ. ಎಲ್ಲಿಯೂ ಕೂಡಾ ಮಳೆ ಬರುತ್ತಿಲ್ಲ. ಮಳೆಯ ಪ್ರಮಾಣ ದಿನ ದಿನಕ್ಕೆ ಕಡಿಮೆಯಾಗುತ್ತಿದೆ. ನಮ್ಮ ವಿಜ್ಞಾನಿಗಳು ಎಷ್ಟರಮಟ್ಟಿಗೆ ಹೋಗಿ ಎಚ್ಚರಿಕೆ ಕೊಟ್ಟಿದ್ದಾರೆಂದರೆ ಒಂದು ದಿವಸ ಈ ಭೂಮಿ ಬೆಂಕಿಯ ಉಂಡೆಯಂತಾಗುತ್ತದೆ.

ಆ ತರಹ ನಮ್ಮ ಪರಿಸರದಲ್ಲಿ ಬದಲಾವಣೆಗಳಾಗುತ್ತವೆ. ಇದರ ಬಗ್ಗೆ ಏನಾದರೂ ಮಾಡಬೇಕೆನ್ನುವ ಮಾತನ್ನೂ ಸಹ ಅವತ್ತು ಹೇಳಿದ್ದಾರೆ. ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ನಾನು ಒತ್ತಿ ಹೇಳಬೇಕಾಗುತ್ತದೆ. ಇವತ್ತು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕಾದರೆ ಕೆಲವು ಪ್ರಯೋಗಗಳಾಗಿವೆ. ಅಣ್ಣಾ ಹಜಾರೆ ಯವರು ಒಂದು ಯಶಸ್ವಿ ಪ್ರಯೋಗವನ್ನು ಮಾಡಿದ್ದಾರೆ. ಅವರೇನು ತಜ್ಞರಲ್ಲ, ಬುದ್ಧಿವಂತರಲ್ಲ, ಓದಿ ಬರೆದವರಲ್ಲ. ಆದರೂ ಒಂದು ಪ್ರಯೋಗ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ವಿನಂತಿ ಮಾಡುತ್ತೇನೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಸಚಿವರು, ಇಂದು ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೋಟಿಗಟ್ಟಲೆ ದುಡ್ಡು ಬರುತ್ತಿದೆ. ಸರ್ಕಾರದವರು ಯಾರೂ ಕೂಡಾ ದುಡಿಯದೆ ಖಾಲಿಯಿರಬಾರದು, ಬೇರೆ ಕಡೆ ಹೋಗಿ migration ಆಗಬಾರದೆಂಬ ಉದ್ದೇಶದಿಂದ ಈ ವ್ಯವಸ್ಥೆಯನ್ನು ತಂದಿದೆ. ಆದರೆ, ಇವತ್ತು ಉದ್ಯೋಗ ಖಾತ್ರಿ ಯೋಜನೆ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿದೆ, ಎಷ್ಟರಮಟ್ಟಿಗೆ ನಿಜವಾದ ಫಲಾನುಭವಿಗಳಿಗೆ ಮುಟ್ಟುತ್ತಿದೆ ಎಂಬುದನ್ನು ಸ್ವಲ್ಪ ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ನಿಜವಾಗಿ ಇದು ಇನ್ನೂ ಒಂದು ತರಹದ ಸಮಸ್ಯೆಯನ್ನು ಉದ್ಭವ ಮಾಡಿದೆ. ನಾನು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಒಂದು ಸಲಹೆ ಕೊಡುತ್ತೇನೆ. ತಾವು ದುಡ್ಡು ಕೊಡುತ್ತೀರಿ. ಮಹಾತ್ಮ ಗಾಂಧಿ ರೋಜ್‌ಗಾರ್ ಯೋಜನೆಯಲ್ಲಿ ಸಾಕಷ್ಟು ದುಡ್ಡು ಬರುತ್ತಿದೆ. ಸಮಸ್ಯೆ ಇರುವುದು ಎಂದರೆ, ಗ್ರಾಮ ಪಂಚಾಯಿತಿಗಳು ಇನ್ನೂ Primitive stage ನಲ್ಲಿವೆ. ಅವರು ಹೊಸದಾಗಿ ಬೇರೆ ಬೇರೆ ವರ್ಗಗಳಿಂದ ಹಾಗೂ ಬೇರೆ ಬೇರೆ ಸಮುದಾಯಗಳಿಂದ ಬಂದಿದ್ದಾರೆ. ಅವರಿಗೆ ಸ್ಪಷ್ಟವಾದ ಪಂಚಾಯಿತಿ ಅಭಿವೃದ್ಧಿಗಳ ಬಗ್ಗೆ ಕಲ್ಪನೆ ಇಲ್ಲ. ನಮ್ಮ ದೇಶದಲ್ಲಿ ಯೋಜನೆಗಳನ್ನು ಅನುಷ್ಠಾನ ಮಾಡಲು Planning commission ಇದೆ. ಜಿಲ್ಲಾ ಮಟ್ಟದಲ್ಲಿ Planning Committee ಗಳಿವೆ. ಇವತ್ತು ಗ್ರಾಮ ಪಂಚಾಯಿತಿಗೆ ಈ ತರಹ advise ಮಾಡುವ ಯಾವುದೇ ಒಂದು ಯೋಜನೆ ಮಾಡುವ ತಜ್ಞರಿಲ್ಲ, ಕಮಿಟಿ ಇಲ್ಲ. ಹಾಗಾಗಿ ಯಾವ ಆದ್ಯತೆ ಕೊಟ್ಟು ಕಾರ್ಯಕ್ರಮವನ್ನು ಅನುಷ್ಠಾನ ಮಾಡಬೇಕು ಎಂದು ಹಣ ಕೊಡುತ್ತೀರಿ? ವಾಸ್ತವ ರೂಪದಲ್ಲಿ ಇದು ಅನುಷ್ಠಾನವಾಗುತ್ತಿಲ್ಲ. ಬಹುತೇಕ ಪಂಚಾಯಿತಿಗಳಲ್ಲಿ ಈ ಉದ್ಯೋಗ ಖಾತ್ರಿ ಯೋಜನೆಯಲ್ಲಿ ರಸ್ತೆ

ಮಾಡಿದ ಮೇಲೆ ಮತ್ತೆ ರಸ್ತೆ ಮಾಡುತ್ತಾರೆ. ಮಾಡಿದ ಕೆಲಸವನ್ನೇ ಮತ್ತೆ ಮಾಡಿ ಹೋಗುತ್ತಾರೆ. ಇದರಲ್ಲಿ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರವಾಗುತ್ತಿದೆ. ಎಲ್ಲಾ ಪಂಚಾಯಿತಿಗಳಲ್ಲಿಯೂ ಈ ರೀತಿ ಇದೆ. ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡುವುದೇನೆಂದರೆ, ಉದ್ಯೋಗ ಖಾತ್ರಿ ಯೋಜನೆಯನ್ನು ಪ್ರಾಮಾಣಿಕವಾಗಿ ಅನುಷ್ಠಾನ ಮಾಡುವ ಉದ್ದೇಶ ಸರ್ಕಾರಕ್ಕೆ ಇದ್ದಲ್ಲಿ ಮತ್ತು ದುಡಿಯುವ ಕೈಗಳಿಗೆ ಕೆಲಸ ಕೊಡುವ ಒಂದು asset create ಮಾಡುವುದಕ್ಕೆ ಒಂದು ಶಾಶ್ವತವಾದ ಆಸ್ತಿ create ಮಾಡಲು ತಾವು ಪಂಚಾಯಿತಿಗಳಿಗೆ Planning ಕೊಡಬೇಕು. ಅವರಿಗೆ Planning ಇಲ್ಲ. ಅವರ ಬಳಿ ಆದ್ಯತೆ ಪಟ್ಟಿ ಇಲ್ಲ. ಬಂದಂತಹ ದುಡ್ಡನ್ನು ಒಟ್ಟಿನಲ್ಲಿ ಖರ್ಚು ಮಾಡಬೇಕು, ಖರ್ಚು ಮಾಡಿ ನಾವೂ ಖರ್ಚು ಮಾಡಿದ್ದೇವೆ ಎನಿಸಿಕೊಳ್ಳಬೇಡಿ. ಇದು ಆದ್ಯತೆ ಆಗಿದೆ. ಹಾಗಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಒಂದು asset create ಮಾಡುವ ಕೆಲಸವನ್ನು ಮಾಡಿ. ಅದರಲ್ಲೂ ವಿಶೇಷವಾಗಿ ಯಾವ ಕ್ಷೇತ್ರದಲ್ಲಿ ಮಾಡಬೇಕೆಂದರೆ, ಅದು ನೀರನ್ನು ನಿಲ್ಲಿಸುವಂಥಹ ಕೆಲಸವಾಗಬೇಕು. ಹನಿ-ಹನಿ ನೀರನ್ನು ಹಿಡಿದಿಡುವ ಪ್ರಯತ್ನ ಇಂದಿನಿಂದ ನಿರಂತರವಾಗಿ ನಡೆದುಕೊಂಡು ಬಂದರೆ, ಇನ್ನು ಹತ್ತಾರು ವರ್ಷಗಳಲ್ಲಿಯಾದರೂ ಈ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿದೆ. ಈಗಿನ ಪ್ರಧಾನ ಮಂತ್ರಿ ಡಾ॥ ಮನಮೋಹನ್ ಸಿಂಗ್ ರವರು ಒಂದು seminar ನಲ್ಲಿ ಹೇಳಿದ ಒಂದು ಮಾತನ್ನು ನಾನು ಮೆಚ್ಚುತ್ತೇನೆ. ಅವರು ಏನು ಹೇಳಿದರೆಂದರೆ, ಈ ಭೂಮಿಯಲ್ಲಿ ಮಳೆ ನೀರನ್ನು ನಾವು fixed deposit ರೀತಿಯಲ್ಲಿ ಇಟ್ಟಕೊಂಡು ಅದರ ಬಡ್ಡಿಯನ್ನು ಮಾತ್ರ ಉಪಯೋಗ ಮಾಡಿಕೊಳ್ಳಬೇಕು, ಉಪಯೋಗಿಸಿಕೊಳ್ಳಬೇಕು. ಆಗ ಮಾತ್ರ ನೀರಿನ ಸಂಪತ್ತನ್ನು ಉಳಿಸಿಕೊಳ್ಳಲು ಸಾಧ್ಯ ಎಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ಇದು ವಾಸ್ತವ ಸತ್ಯ. ಇವತ್ತು ಎಷ್ಟು ಕಡೆ ನೀರಿನ ಸಮಸ್ಯೆ ಇದೆ ಎಂದರೆ, ನನ್ನ ಕ್ಷೇತ್ರದಲ್ಲಿ ಸುಮಾರು 50 ಹಳ್ಳಿಗಳಲ್ಲಿ transportation ಮಾಡುತ್ತಿದ್ದೇವೆ. ನಿಮ್ಮಂತಹ ಮಲೆನಾಡು ಸ್ನೇಹಿತರು ಕೆಲವು ಕಡೆ ಸಿಕ್ಕಾಗ ಹೇಳುತ್ತಿರುತ್ತಾರೆ. ಧಾರಕಾರ ಮಳೆ ಸುರಿಯುವಂತಹ ಮಲೆನಾಡು ಪ್ರದೇಶದಲ್ಲಿಯೂ ಕೂಡಾ ಕುಡಿಯುವ ನೀರಿನ ಸಮಸ್ಯೆಯಾಗಿದೆ. ನೀರಿನ ಸಮಸ್ಯೆಯನ್ನು ಬಗೆಹರಿಸುವ ಶಾಶ್ವತ

ಯೋಜನೆಯನ್ನು ನಾವು ಎಲ್ಲಿಯವರೆಗೆ ತಯಾರು ಮಾಡುವುದಿಲ್ಲವೋ, ಅನುಷ್ಠಾನ ಮಾಡುವುದಿಲ್ಲವೋ ಅಲ್ಲಿಯವರೆಗೆ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯ ಇಲ್ಲ. ಅದೇ ರೀತಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ forest. ನಾವು ಎಷ್ಟು ಕಡೆ ಸಸಿಗಳನ್ನು ನೆಟ್ಟಿದ್ದೇವೆ? ಎಷ್ಟು ಕಡೆ ಬೆಳೆಸಿದ್ದೇವೆ? ಎಷ್ಟು ಬೆಳೆದಿದೆ ಅದನ್ನು Social Audit ಮಾಡುವ ಒಂದು ಪದ್ಧತಿ ನಮ್ಮಲ್ಲಿ ಇಲ್ಲವೇ ಇಲ್ಲ. ಯಾವ ಕೆಲಸಕ್ಕಾಗಿ ದುಡ್ಡು ಖರ್ಚಾಗಿದೆ, ಎಲ್ಲಿ ಅಭಿವೃದ್ಧಿಯಾಗಿದೆ, ಯಾವ ಮಟ್ಟದಲ್ಲಿ ಫಲ ಸಿಕ್ಕಿದೆ ಎಂಬ Social Audit ಕೂಡ ನಮ್ಮಲ್ಲಿ ಆಗಿಲ್ಲ. ಗ್ರಾಮ ಪಂಚಾಯಿತಿಗಳಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಕೊಡುತ್ತಿದ್ದೇವೆ, ವಾಸ್ತವಿಕವಾದ ಪ್ರಗತಿ ಯಾವ ದಿಕ್ಕಿನಲ್ಲಿ ಆಗಬೇಕಿತ್ತೋ ಅದು ಆಗುತ್ತಿಲ್ಲ ಎಂಬುದು ನನ್ನ ಒಂದು ಅನಿಸಿಕೆ. ನಮ್ಮಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಬೆಳಿಗ್ಗೆ ಈ ತಿದ್ದುಪಡಿ ವಿಷಯದಲ್ಲಿ ಮಾತನಾಡುತ್ತಿದ್ದರು. ಹಿಂದೆ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮೊದಲ ಬಾರಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಎಂಬ ಕಾನೂನನ್ನು ತಂದರು. ಅವತ್ತು ಮಂಡಲ ಪಂಚಾಯಿತಿಯಲ್ಲಿ ಪಕ್ಷಗಳ ಆಧಾರದ ಮೇಲೆ ಚುನಾವಣೆ ನಡೆಯಬೇಕೆಂಬುದಕ್ಕೆ ಕಾನೂನಿನಲ್ಲಿ ಅವಕಾಶ ಮಾಡಿಕೊಟ್ಟರು. ಆಗ ಏನಾಗುತ್ತಿತ್ತು ಈಗ ಪಕ್ಷದ ವ್ಯವಸ್ಥೆ ನಮ್ಮಲ್ಲಿ ಇದೆ. ಕೇಂದ್ರ ಮಟ್ಟದ ರಾಷ್ಟ್ರೀಯ ಪಕ್ಷಗಳು, ರಾಜ್ಯಮಟ್ಟದ ರಾಜ್ಯಪಕ್ಷಗಳು. ಅವರವರ ಪಕ್ಷದ ಮೇಲೆ ಅವರಿಗೆ ಹಿಡಿತವಿರುತ್ತದೆ. ದಿಕ್ಕು-ದಿಸೆಯನ್ನು ತೋರಿಸುವ ಅವಕಾಶವಿರುತ್ತದೆ. ಇಂದು ಪಕ್ಷಾತೀತವಾಗಿ ಚುನಾವಣೆ ನಡೆಸುವುದರಿಂದ ಪಂಚಾಯಿತಿಗಳ ಮೇಲೆ ಯಾರದೂ ನಿಯಂತ್ರಣವಿರುವುದಿಲ್ಲ. ವಾಸ್ತವಿಕವಾಗಿ ರಾಜಕಾರಣ ನಡೆಯುವುದೆಲ್ಲಾ ಪಕ್ಷದ ಆಧಾರದ ಮೇಲೆಯೇ. ನಮ್ಮ ಕ್ಷೇತ್ರದಲ್ಲಿ ಯಾರ್ಯಾರು ನಿಲ್ಲಬೇಕು ಎಂಬುದನ್ನು ಸಾಮಾನ್ಯವಾಗಿ ನಮ್ಮ ಪಕ್ಷದ ಆಧಾರದ ಮೇಲೆಯೇ ಚುನಾವಣೆ ನಡೆಯುತ್ತದೆ. ಅಲ್ಲಿ ವ್ಯತ್ಯಾಸವೇನೆಂದರೆ, ಅಲ್ಲಿ symbol ಮಾತ್ರ ಇರುವುದಿಲ್ಲ, ಆದರೆ ಅವರೆಲ್ಲರೂ ಪಕ್ಷದವರಾಗಿರುತ್ತಾರೆ. ಇವತ್ತು ಈ ಪಂಚಾಯಿತಿಗಳನ್ನು ಸರಿಯಾದ ದಾರಿಗೆ ತರಬೇಕಾದರೆ ಮತ್ತೆ ಸರ್ಕಾರದವರು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕಾದರೆ ಪಕ್ಷದ ಆಧಾರದ ಮೇಲೆಯೇ ಚುನಾವಣೆಗೆ ತರುವುದು ಉತ್ತಮ ಎನ್ನುವ ಮಾತನ್ನು ಹೇಳುತ್ತೇನೆ. ಇಂದು ಸಾಮಾಜಿಕ ನ್ಯಾಯವನ್ನು ಒದಗಿಸುವ

ಹಿನ್ನೆಲೆಯಲ್ಲಿ ವಿವಿಧ ಜನಾಂಗ, ಸಮುದಾಯಗಳಿಗೆ ಆದ್ಯತೆ ನೀಡಿ, ಅವರಲ್ಲಿ ಅಧ್ಯಕ್ಷ, ಉಪಾಧ್ಯಕ್ಷರನ್ನಾಗಿ ಮಾಡುತ್ತಿದ್ದೇವೆ, ಜಿಲ್ಲಾ ಪಂಚಾಯಿತಿಯಿಂದ ಹಿಡಿದು ಗ್ರಾಮ ಪಂಚಾಯಿತಿಯವರೆಗೆ. ಒಂದು ನನಗೆ ಅರ್ಥವಾಗಿಲ್ಲ. ಕೇವಲ ಮೀಸಲಾತಿ ಕೊಟ್ಟು ಒಂದು ಸಮುದಾಯಕ್ಕೆ ತೃಪ್ತಿ ಕೊಡುವ ಕೆಲಸವಾಗುತ್ತಿದೆಯೇ ಹೊರತಾಗಿ ಆ ಸಮುದಾಯದಲ್ಲಿ ನಾಯಕತ್ವ ಬೆಳೆಸುವ ಕೆಲಸವಾಗುತ್ತಿಲ್ಲ. ಒಬ್ಬ ಅಧ್ಯಕ್ಷ ಬರುತ್ತಾನೆ. ಅವನು 22 ತಿಂಗಳು, ಇನ್ನೊಬ್ಬ ಬರುತ್ತಾನೆ, 2 ವರ್ಷ, ಮತ್ತೊಬ್ಬ ಬರುತ್ತಾನೆ, 10 ತಿಂಗಳು, ಈ ರೀತಿ ಮೀಸಲಾತಿಯನ್ನು ನಮ್ಮ ರಾಜಕೀಯ ಪಕ್ಷಗಳ ತಾಳಕ್ಕೆ ತಕ್ಕಂತೆ ಉಪಯೋಗ ಮಾಡಿಕೊಂಡು ಆ ಸಮುದಾಯಗಳನ್ನು ತೃಪ್ತಿ ಮಾಡುತ್ತಿದ್ದೇವೆಯೇ ಹೊರತು ಆ ಸಮುದಾಯದಲ್ಲಿ ನಾಯಕತ್ವ ಮೂಡಿಸುವ ಕೆಲಸವಾಗುತ್ತಿಲ್ಲ. ಒಂದು ವೇಳೆ ಈ ಸಾಮಾಜಿಕವಾದ ನ್ಯಾಯ ಸಿಗಬೇಕು, ಬೇರೆ ಬೇರೆ ಸಮುದಾಯಗಳಲ್ಲಿ, ಸಮಾಜದಲ್ಲಿ ವ್ಯಕ್ತಿತ್ವ, ನಾಯಕತ್ವ ಬೆಳೆಯಬೇಕಾದರೆ, ಅವರಿಗೆ ಪೂರ್ಣಾವಧಿ ಅವಕಾಶ ಕೊಟ್ಟು ಅವರೂ ಕೂಡಾ ಬೆಳೆಯಬೇಕು. ಅವರೂ ಕೂಡಾ ಕೆಲಸ ಮಾಡಿ ತಮ್ಮ ಸಾಧನೆಯನ್ನು ತೋರಿಸಿಕೊಳ್ಳಬೇಕು. ಹಾಗಾದರೆ ಸಾಮಾಜಿಕ ನ್ಯಾಯ ಕೊಟ್ಟ ಹಾಗೆ ಆಗುತ್ತದೆ. ಇವತ್ತು ಗ್ರಾಮ ಸಭೆ ಬಗ್ಗೆ ಸಚಿವರು ತಿದ್ದುಪಡಿ ತಂದಿದ್ದಾರೆ. ಇವತ್ತು ನಮ್ಮ ಭಾರತೀಯ ಸಮಾಜ ಒಂದು ವಿಚಿತ್ರವಾದ ಸಮಾಜ. ಅನೇಕ ಸಾಮಾಜಿಕ ಸಮಸ್ಯೆಗಳಿವೆ. ಇಂತಹುದರಲ್ಲಿ ಒಂದು ಗ್ರಾಮ ಸಭೆ ನಡೆಸಬೇಕೆಂದರೆ ಬಹಳ ಕಷ್ಟದ ಕೆಲಸ. Parliament ನಡೆಸಲು ಆಗುತ್ತಿಲ್ಲ, ವಿಧಾನಸಭೆ ಸರಿಯಾದ ರೀತಿಯಲ್ಲಿ ನಡೆಸಲಾಗುತ್ತಿಲ್ಲ. ನಾವು ಹೋಗಿ ಹಳ್ಳಿಯಲ್ಲಿ ಗ್ರಾಮ ಸಭೆ ನಡೆಸಬಾರದೆಂದಲ್ಲ. ಆದರೆ matured democracy ಯಲ್ಲಿ ಇದನ್ನು ಮಾಡಲು ಸಾಧ್ಯವಿದೆ. ಈ ರೀತಿಯ ಸಾಮಾಜಿಕ ಏರುಪೇರು, ಜಾತಿ ವ್ಯವಸ್ಥೆ ಇರುವ ಸಮಾಜದಲ್ಲಿ ಏನಾಗುತ್ತದೆಂದರೆ, ಸಮಾಜದಲ್ಲಿರುವ ಜಾತಿ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಗ್ರಾಮ ಸಭೆಗೆ ಅನುಕೂಲ ಇರುವವರು. ಬಲಿಷ್ಠ ಜಾತಿಯವರು ಬರುತ್ತಾರೆ. ದುಡಿಯುವವರು, ಕೂಲಿ ಮಾಡುವವರು, ನಿರ್ಗತಿಕರು, ಹೆಣ್ಣು ಮಕ್ಕಳು ಯಾರೂ ಕೂಡಾ ಇಂತಹ ಸಭೆಗೆ ಬರಲು ಸಾಧ್ಯವಿಲ್ಲ. ಬಂದರೂ ಕೂಡಾ ಅಂತಹವರು ಸಭೆಯಲ್ಲಿ ಕೂರಲು ಸಾಧ್ಯವಿಲ್ಲ. ಏಕೆಂದರೆ, Anti-Social elements ಬರುತ್ತಾರೆ. ಕೆಲವು ಸಾಮಾಜಿಕ ಹಿತಾಸಕ್ತರು ಬಂದು ಸಭೆಯನ್ನು

ಕೆಡಿಸುತ್ತಾರೆ. ಅನೇಕ ಕಡೆ ಆ ರೀತಿ ಆಗಿದೆ. ಅನೇಕ ಕಡೆ ಗ್ರಾಮ ಸಭೆಗಳಲ್ಲಿ Law & order problem ಆಗಿದೆ. ಇಂತಹ ಒಂದು ವ್ಯವಸ್ಥೆಯನ್ನು...

**ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**: ಮಾನ್ಯ ಅಧ್ಯಕ್ಷರೆ, ಮಾನ್ಯ ಬಿ.ಆರ್.ಪಾಟೀಲ್ ರವರು ಹೇಳುವುದನ್ನು ಕೇಳಿದರೆ, ನಮ್ಮ ದೇಶದೊಳಗೆ ಈ ಜಾತಿ ವ್ಯವಸ್ಥೆಯ ಕಾರಣದಿಂದಾಗಿ ನಾವು ಗ್ರಾಮ ಸಭೆ ನಡೆಸುವುದಕ್ಕೆ ಬರುವುದಿಲ್ಲ, Assembly ಸರಿಯಾಗಿ ನಡೆಯುವುದಿಲ್ಲ, Parliament ನಡೆಯುವುದಿಲ್ಲ, ಅದಕ್ಕಾಗಿ ಯಾವುದೇ ಸಭೆಗಳನ್ನು ನಡೆಸಬಾರದೆಂದಾಯಿತು. This feudalistic mind should be totally changed. ಈಗ ನಮ್ಮ, ನಿಮ್ಮ ಊರಿನಲ್ಲಿ, ಮತ್ತೊಂದು ಊರಿನಲ್ಲಿ ದೈವ ಕೂಡುವುದೇ ಇಲ್ಲವೇನು ಹಾಗಾದರೆ? ಯಾರದಾದರೂ ಮದುವೆಯಾದರೆ, ಮದುವೆಗೆ ಏನು ಅಡುಗೆ ಮಾಡಿಸೋಣ ಎಂದು ಮಾತನಾಡುವುದಕ್ಕೆ ದೈವ ಕರೆಯುತ್ತಾರೆ. ಆ ದೈವ ಕೂಡದೆ ಇರುವ ಒಂದು ಹಳ್ಳಿಯ ಹೆಸರು ಹೇಳಿ. ಜಗಳ ಆಡಬಹುದು, ನಾನು ಉಮೇಶ್ ಕತ್ತಿ ಯವರು ಆ ಊರಿನಲ್ಲಿ ಹೋಗಿ ನಿಂತರೆ, ನನ್ನ ಪರವಾಗಿ ಒಂದಷ್ಟು ಜನ, ಉಮೇಶ್ ಕತ್ತಿಯವರ ಪರವಾಗಿ ಒಂದಷ್ಟು ಜನ ಘೋಷಣೆ ಹಾಕಬಹುದು. ಆದರೆ ಸಭೆಗೆ ಬನ್ನಿ, ಗುಡಿ ಕಟ್ಟೆ ಮೇಲೆ ಕುಳಿತುಕೊಳ್ಳೋಣ ಬನ್ನಿ ಎಂದರೆ ಯಾವ ಊರಿನಲ್ಲಿ ಜನರು ಕೂಡದೇ ಇರುವುದು? ಹಾಗೆ ಕೂಡಿದರೆ ಹಳ್ಳಿಯೊಳಗೆ Anti-Social elements ಬರುತ್ತವೆ ಏನು? ಕೆಟ್ಟ ಮನುಷ್ಯರೂ ಅಲ್ಲಿರುವ ವ್ಯವಸ್ಥೆಗೆ ತಲೆಬಾಗುವಂತಹ ಸನ್ನಿವೇಶ ಇದೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ, ಕರ್ನಾಟಕದ ಹಳ್ಳಿಯಲ್ಲಿ ಗ್ರಾಮಸಭೆ ನಡೆಯುವುದಿಲ್ಲವೆನ್ನುವ ವಾತಾವರಣ ಇದೆಯೆಂದರೆ ಇದನ್ನು ಒಪ್ಪುವುದಕ್ಕಾಗುವುದಿಲ್ಲ.

**ಶ್ರೀ ಬಿ.ಆರ್.ಪಾಟೀಲ್** : ನಾನು ಕರ್ನಾಟಕಕ್ಕಷ್ಟೇ ಸೀಮಿತವಾಗಿ ಹೇಳುತ್ತಿಲ್ಲ.

**ಅಧ್ಯಕ್ಷರು** : ಸಮಯ ಮೀರುತ್ತಿದೆ.

**ಶ್ರೀ ಬಿ.ಆರ್.ಪಾಟೀಲ್** : ಇವತ್ತು ಕರ್ನಾಟಕದಲ್ಲಿ ಸಾಮಾಜಿಕ ವ್ಯವಸ್ಥೆ ಎಷ್ಟು ಕೆಟ್ಟಿದೆಯೆಂದರೆ, ಎಲ್ಲರೂ ಸಮಾನವಾಗಿ ಕುಳಿತುಕೊಂಡು ಮಾತನಾಡುವ ವಾತಾವರಣವಿಲ್ಲ. ಅಂತಹ ವಾತಾವರಣ ಸೃಷ್ಟಿಸಲು ಎಲ್ಲೆಡೆಗಳಿಂದಲೂ

ಪ್ರಯತ್ನಗಳಾಗಬೇಕಾಗಿದೆ. ಇದಕ್ಕೆ ನಾನು ವಿರುದ್ಧವಿಲ್ಲ. ಇದೊಂದು People's Parliament ಎನುವ ಪರಿಕಲ್ಪನೆ ಇರಿಸಿಕೊಂಡು ಗ್ರಾಮಸಭೆಗಳು ಕಾರ್ಯ ನಿರ್ವಹಿಸಬೇಕಾಗಿದೆ. ಗ್ರಾಮಸಭೆ ನಡೆಯಲು ಇನ್ನೂ ಕಾಲ ಪಕ್ವವಾಗಿಲ್ಲವೆಂದು ನನಗನಿಸುತ್ತದೆ. ಕಾಲ ಪಕ್ವವಾಗುವ ದಿಕ್ಕಿನಲ್ಲಿ ಇಲ್ಲಿಯವರೆಗೆ ಪ್ರಾಮಾಣಿಕ ಪ್ರಯತ್ನಗಳು ನಡೆದಿಲ್ಲ. ಗ್ರಾಮಸಭೆಗಳು ಜರುಗಬೇಕಾಗಿದ್ದರೆ, ಸಾಮಾಜಿಕ, ರಾಜಕೀಯ, ಆರ್ಥಿಕ ಬದಲಾವಣೆಗಳಾಗಬೇಕು, ಗಂಡು–ಹೆಣ್ಣು, ಮೇಲು–ಕೀಳು ಎನ್ನುವ ಭೇದ–ಭಾವ ಕಡಿಮೆಯಾಗಬೇಕು. ಆಗ ಮಾತ್ರ ಪರಿಪಕ್ವ ಗ್ರಾಮಸಭೆಗಳನ್ನು ನಡೆಸಲು ಸಾಧ್ಯವಾಗುತ್ತದೆ.

**ಅಧ್ಯಕ್ಷರು :** ಸಮಯ ಮೀರುತ್ತಿದೆ.

**ಶ್ರೀ ಬಿ.ಆರ್.ಪಾಟೀಲ್ :** ಅಭಿವೃದ್ಧಿ ಮಾಡಬೇಕೆಂದರೆ, ಗ್ರಾಮ ಪಂಚಾಯಿತಿ ಆಧಾರದಲ್ಲಿ ನಾವು ಅಭಿವೃದ್ಧಿ ಕಾಣಬೇಕಾಗುತ್ತದೆ. ಪಂಚಾಯಿತಿ ವಿಕೇಂದ್ರೀಕರಣ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡಿದ್ದೇವೆ. ಇವತ್ತು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಹೋಗಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ನಾವು ಹೇಳುತ್ತೇವೆ. ಎಲ್ಲಾ ಕಡೆಗಳಲ್ಲಿ ನಮಗಾಗಿರುವ ಅನುಭವಗಳೇನೆಂದರೆ, ಗ್ರಾಮ ಪಂಚಾಯಿತಿಯಲ್ಲಿ, ಗ್ರಾಮಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಮನೆಗಳು ಇದ್ದವರಿಗೆ ಪುನಃ ಮನೆಗಳನ್ನು ಕೊಟ್ಟಿದ್ದಾರೆ! ಅಗತ್ಯವಿರುವ ಯಾವುದೇ ಫಲಾನುಭವಿಗಳಿಗೂ ಈ ಸೌಲಭ್ಯ ಮುಟ್ಟುತ್ತಿಲ್ಲ. ಏಕೆಂದರೆ, ಅಲ್ಲಿ ರಾಜಕೀಯ ಹಸ್ತಕ್ಷೇಪವಿದ್ದು, ಪ್ರಭಾವಿ ವ್ಯಕ್ತಿಗಳ ಕೈವಾಡವಿದೆ. ಮಾನ್ಯ ಪಾಟೀಲರೆ, ತಾವು ಯೋಚನೆ ಮಾಡಿ. ಈಗ ಯಾರ್ಯಾರು ಬಿ.ಪಿ.ಎಲ್. ಕಾರ್ಡುದಾರರಿದ್ದಾರೆ, ಅವರ್ಯಾರಿಗೂ ಮನೆಗಳಿಲ್ಲ, ಅನುಕೂಲಗಳಿಲ್ಲ. ಇಂತಹವರಿಗೆ ಸಂಬಂಧಿಸಿದಂತೆ ವೈಜ್ಞಾನಿಕ ಆಧಾರದಲ್ಲಿ ಪಟ್ಟಿ ತಯಾರಿಸಿ, ಸಾಲಭ್ಯ ಒದಗಿಸಿಕೊಡುವ ದಿಸೆಯಲ್ಲಿ ಕಟ್ಟುನಿಟ್ಟಾಗಿ ಕಾರ್ಯಕ್ರಮ ಹಾಕಿಕೊಂಡರೆ ನಿಜವಾಗಿಯೂ ಬಡವರಿಗೆ ಮನೆಗಳನ್ನು ಹಂಚಬಹುದು ಮತ್ತು ಇದರಿಂದ ನಿಜವಾದ ಫಲಾನುಭವಿಗಳು ಲಾಭ ಹೊಂದಲು ಸಾಧ್ಯವಿದೆ. ಅನೇಕ ಕಡೆಗಳಿಂದ ದೂರುಗಳು ಬಂದಿದ್ದು, ಅನೇಕ ಮನೆಗಳಿದ್ದವರಿಗೆ ಪುನಃ ಮನೆಗಳನ್ನು ಕೊಟ್ಟಿದ್ದಾರೆ! ರಾಜಕೀಯ ಹಸ್ತಕ್ಷೇಪವೆಸಗಿ ಅನುಕೂಲವಿದ್ದವರಿಗೆ ಮನೆಗಳನ್ನು ಹಂಚಿದ್ದಾರೆ. ನಿಜವಾಗಿಯೂ ಬಡವರಿಗೆ ಮತ್ತು ಕೆಳವರ್ಗದ

ಜನರಿಗೆ ಈ ಸೌಲಭ್ಯ ಸಿಕ್ಕಿಲ್ಲ. ಇಂತಹ ಸಮಸ್ಯೆಗಳಿರುವಾಗ ಇದನ್ನು ಯಾವ ರೀತಿ ಬಗೆಹರಿಸುತ್ತೀರಿ ಎಂಬುದನ್ನು ತಾವು ಯೋಚಿಸಬೇಕು.

ಇಡೀ ರಾಜ್ಯದಲ್ಲಿ ಬಿ.ಪಿ.ಎಲ್. ಕಾರ್ಡುಗಳನ್ನು ಹಂಚುವಲ್ಲಿ ಹೆಚ್ಚು ಅಧ್ವಾನವಾಗಿದೆ. ಇದರಿಂದಾಗಿ ಬಹಳಷ್ಟು ಬಿ.ಪಿ.ಎಲ್. ಡಿ ಕಾರ್ಡುಗಳನ್ನು ರದ್ದು ಮಾಡಿದರು. ನಿಜವಾಗಿಯೂ ಯಾರು ಬಡವರಿದ್ದಾರೋ ಅವರಿಗೆ ಕಾರ್ಡುಗಳು ಸಿಕ್ಕಿಲ್ಲ. ಪಂಚಾಯತಿಗಳ ಮುಖಾಂತರ ಬಿ.ಪಿ.ಎಲ್. ಕಾರ್ಡುಗಳಿಗೆ ಮತ್ತೆ ಅರ್ಜಿಗಳನ್ನು ಸಲ್ಲಿಸಬೇಕೆಂದು ಸರ್ಕಾರ ಹೇಳಿದ್ದರೂ, ಅನೇಕ ಪಂಚಾಯತಿಗಳಲ್ಲಿ ಕಂಪ್ಯೂಟರ್ ಸರ್ವರ್‌ಗಳಿಗೆ ಮಾಹಿತಿಗಳು ಹೋಗುವುದಿಲ್ಲ. ಏಕೆಂದರೆ, ಹಳ್ಳಿಗಳಲ್ಲಿ ಬಿ.ಎಸ್.ಎನ್.ಎಲ್. ಲೈನ್ ಇರುವುದರಿಂದ ಕಂಪ್ಯೂಟರ್ ಸರ್ವರ್‌ಗೆ ಮಾಹಿತಿಗಳು ಹೋಗುವುದಿಲ್ಲ. ಅವರೆಲ್ಲರೂ ತಾಲ್ಲೂಕು ಕಛೇರಿಗಳಿಗೆ ತೆರಳಬೇಕು. ಅಲ್ಲಿ ದೊಡ್ಡ ಕ್ಯೂ ಇರುತ್ತದೆ. ಪಂಚಾಯತಿಗಳಲ್ಲಿ ಕಂಪ್ಯೂಟರ್ ಸರಿಯಾಗಿ ಕೆಲಸ ಮಾಡದಿರುವ ಕಾರಣಕ್ಕಾಗಿ ಒಂದು ಪಹಣಿಯನ್ನೂ ಒದಗಿಸಿಕೊಡುವುದಕ್ಕಾಗುತ್ತಿಲ್ಲ. ಇದಕ್ಕೆ ತಾವು ಸ್ಪಷ್ಟವಾದ ಉತ್ತರ ನೀಡಬೇಕು.

**ಅಧ್ಯಕ್ಷರು :** ವ್ಯವಸ್ಥೆ ಸರಿಪಡಿಸುವುದಕ್ಕೆ ತಮ್ಮ ಸಲಹೆ ಕೊಡಬೇಕು.

**ಶ್ರೀ ಬಿ.ಆರ್.ಪಾಟೀಲ್ :** ಬಿ.ಎಸ್.ಎನ್.ಎಲ್. ಸರ್ವರ್‌ಗಳು ಕೆಲವು ಕಡೆಗಳಲ್ಲಿ ಕಾರ್ಯ ನಿರ್ವಹಿಸುವುದಿಲ್ಲ. ಕಾರಣ, ಅಲ್ಲಿ ಅದರ ಟವರ್‌ಗಳಿರುವುದಿಲ್ಲ. ಅಂತಹ ಕಡೆಗಳಲ್ಲಿ ಬೇರೆ ಏಜೆನ್ಸಿಗಳಿಗೆ ವಹಿಸಿಕೊಡುವ ವ್ಯವಸ್ಥೆ ಮಾಡಬೇಕು. ಉದಾಹರಣೆಗೆ, ಏರ್‌ಟೆಲ್, ವೋಡಾಫೋನ್ ಇರಬಹುದು. ಈ ರೀತಿ ಬೇರೆ ಏಜೆನ್ಸಿಗಳಿಗೆ ಸಂಪರ್ಕ ಕಲ್ಪಿಸಿಕೊಟ್ಟು ಉದ್ಭವಿಸಿರುವ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡಬೇಕು. ಈ ಕುರಿತಂತೆ ಇನ್ನೂ ಅನೇಕ ವಿಷಯಗಳನ್ನು ನಮ್ಮ ಸ್ನೇಹಿತರು ಹೇಳಿದ್ದಾರೆ. ಪಂಚಾಯತಿಗಳಿಗೆ ಶಕ್ತಿ ಇಲ್ಲದಂತಾಗಿದೆ. ಅದನ್ನೊಂದು ಅಸ್ಥಿಪಂಜರದ ತರಹ ಮಾಡಿ ನಿಲ್ಲಿಸಿದ್ದಾರೆ! ಆದರೆ, ಪಂಚಾಯಿತಿಗಳಿಂದ ಇಂತಿಂತಹ ಕೆಲಸ-ಕಾರ್ಯಗಳಾಗಬೇಕೆಂದು ಮಾತ್ರ ಬಹಳಷ್ಟು ಆಸೆ ಇಟ್ಟುಕೊಂಡಿದ್ದಾರೆ. ಈ ನಿಟ್ಟಿನಲ್ಲಿ ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಪಂಚಾಯತಿಗಳನ್ನು ನಿಜವಾಗಿಯೂ ಬಲಿಷ್ಠಗೊಳಿಸಬೇಕು. ಪಂಚಾಯತಿಗಳಿಂದ ಜನರಿಗೆ ಅನುಕೂಲವಾಗಬೇಕಿದ್ದರೆ, ಪಂಚಾಯತಿಗಳಿಗೆ ಪ್ರತ್ಯೇಕವಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿ ಅದಕ್ಕೆ ಅಗತ್ಯ ಸಿಬ್ಬಂದಿ ವರ್ಗವನ್ನು

ತುಂಬುವ ವ್ಯವಸ್ಥೆ ಮಾಡಬೇಕು. ಅನೇಕ ಕಡೆಗಳಲ್ಲಿ ಪಂಚಾಯತಿಯ ಕಾರ್ಯದರ್ಶಿಯಾದವರು ಗ್ರಾಮ ಪಂಚಾಯಿತಿ ಅಧ್ಯಕ್ಷರ ಮಾತುಗಳನ್ನೇ ಕೇಳುವುದಿಲ್ಲ. ನನ್ನ ಕ್ಷೇತ್ರದಲ್ಲಿ ಗ್ರಾಮ ಪಂಚಾಯತಿ ಕಛೇರಿಯು ಆಳಂದದಲ್ಲಿದೆ. ಪಂಚಾಯಿತಿ ಕಾರ್ಯದರ್ಶಿ ಸಿಕ್ಕಿದರೆ ಮಾತ್ರ ಗ್ರಾಮ ಪಂಚಾಯಿತಿಯ ಕೆಲಸ-ಕಾರ್ಯಗಳಾಗುತ್ತವೆ. ಅಧ್ಯಕ್ಷನಾದವನು ಬೆಳಗ್ಗೆ ಎದ್ದು ಕಾರ್ಯದರ್ಶಿಯನ್ನು ಹುಡುಕಿಕೊಂಡು ಬರುತ್ತಾನೆ, ಪಾಪ! ಬ್ಯೂರೋಕ್ರಾಟ್ಸ್ ಎಷ್ಟು ಡಾಮಿನೇಟ್ ಆಗಿದ್ದಾರೆಂದರೆ,... ಹೇಳುವುದಕ್ಕಾಗುವುದಿಲ್ಲ. ಇವತ್ತು ಎಂ.ಎಲ್.ಎ. ಆದವರು ಎಲ್ಲವನ್ನೂ ಮಾಡಬೇಕೆಂದರೆ ಆಗುವುದಿಲ್ಲ ಎನ್ನುವ ಕಾರಣಕ್ಕೋಸ್ಕರವೇ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ.

**ಅಧ್ಯಕ್ಷರು** : ಪಂಚಾಯಿತಿ ಕಾರ್ಯದರ್ಶಿಯವರು ಪಂಚಾಯಿತಿಯ ಕೇಂದ್ರಸ್ಥಾನದಲ್ಲಿಯೇ ವಾಸಿಸಬೇಕು.

**ಶ್ರೀ ಬಿ.ಆರ್.ಪಾಟೀಲ್** : ಪಂಚಾಯಿತಿಯ ಕೆಲಸ-ಕಾರ್ಯಗಳು ಪಂಚಾಯಿತಿ ಕಛೇರಿಯಲ್ಲಿಯೇ ಆಗಬೇಕು. ಪಂಚಾಯಿತಿ ಕಛೇರಿಯ ಕೆಲಸ-ಕಾರ್ಯಗಳು ತಾಲ್ಲೂಕು ಕೇಂದ್ರಸ್ಥಾನದಲ್ಲಿ ಇಲ್ಲವೇ ಜಿಲ್ಲಾ ಕೇಂದ್ರಸ್ಥಾನದಲ್ಲಿ ನಡೆದರೆ ಪಂಚಾಯಿತಿಗಳಿಗೆ ಯಾವುದೇ ಅರ್ಥ ಇರುವುದಿಲ್ಲ. ಇಂತಹ ಸಮಸ್ಯೆಗಳು ಅನೇಕ ಕಡೆಗಳಲ್ಲಿವೆ. ಪಂಚಾಯಿತಿ ಕಛೇರಿಗಳಲ್ಲಿ ಕಾಗದವಾಗಲಿ, ದಫ್ತರ ಆಗಲಿ, ಕಡತಗಳಾಗಲಿ, ಯಾವುದೂ ಇಲ್ಲ. ಪಂಚಾಯಿತಿಯ ಸಮಸ್ಯೆಯನ್ನು ಬಗೆಹರಿಸಬೇಕಾಗಿದ್ದರೆ, ಅಲ್ಲಿಗೆ ಸಂಪೂರ್ಣ ಸಿಬ್ಬಂದಿಯನ್ನು ಭರ್ತಿ ಮಾಡಬೇಕು ಮತ್ತು ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಕಲ್ಪಿಸಿದಾಗ ಮಾತ್ರ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಸಾಧ್ಯವಿದೆಯೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಸಲಹೆ ಕೊಡುತ್ತಾ, ಸಮಯಾಭಾವವಿದ್ದರೂ ನನಗೆ ಇಷ್ಟು ವಿಷಯಗಳನ್ನು ಪ್ರಸ್ತಾಪಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಜೆ.ಆರ್.ಲೋಬೋ (ಮಂಗಳೂರು ನಗರ (ದಕ್ಷಿಣ)** : ಸನ್ಮಾನ್ಯ ಅಧ್ಯಕ್ಷರೆ, ಘನತವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮಾತನಾಡಲು ನನಗೆ ತಾವು ಅವಕಾಶ ಕಲ್ಪಿಸಿರುವುದಕ್ಕೆ ಮೊದಲನೆಯದಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸನ್ಮಾನ್ಯ ಘನತೆವೆತ್ತ

ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾಡಿರುವ ಭಾಷಣದ ಕಂಡಿಕೆ 3ರಲ್ಲಿರುವ ವಿಷಯಗಳತ್ತ ತಮ್ಮ ಗಮನಸೆಳೆಯಲು ಇಷ್ಟಪಡುತ್ತೇನೆ.

"ಕರ್ನಾಟಕ ಬಹುಭಾಷೆ, ಬಹುಸಂಸ್ಕೃತಿ ಮತ್ತು ಬಹುಧರ್ಮಗಳ ನೆಲೆವೀಡು. ಸೌಹಾರ್ದಯುತ ಬಾಳ್ವೆ ಇಲ್ಲಿನ ಸಹಜ ಜೀವನ ಕ್ರಮ. ಆದರೆ, ಹೆಮ್ಮೆ ಪಡುವಂತಹ ಈ ಅನನ್ಯತೆಯನ್ನು ಇತ್ತೀಚಿನ ಕೆಲವು ವರ್ಷಗಳಲ್ಲಿ ರಾಜ್ಯ ಕಳೆದುಕೊಳ್ಳುತ್ತಾ ಬಂದಿರುವುದು ವಿಷಾದನೀಯ ಬೆಳವಣಿಗೆ. ಇದಕ್ಕೆ ಕಾರಣಗಳನ್ನು ಹುಡುಕಿ, ಹೊಣೆಗಾರರನ್ನು ಗುರುತಿಸಿ ದೋಷಾರೋಪ ಮಾಡುವುದರ ಬದಲು ಆಗಿರುವ ಹಾನಿಯನ್ನು ಮೊದಲು ಸರಿಪಡಿಸಬೇಕಾಗಿದೆ. ಇತರರು ನೋಡಿ ಹೆಮ್ಮೆಪಡುವಂತಿದ್ದ ಕರ್ನಾಟಕದ ಅಸ್ಮಿತೆಯನ್ನು ಪುನರ್ ಸ್ಥಾಪನೆ ಮಾಡಬೇಕಾಗಿದೆ. ರಾಜ್ಯದ ಜನತೆ ಶಾಂತಿ ಮತ್ತು ನೆಮ್ಮದಿಯಿಂದ ಬಾಳುವಂತಹ ಸಾಮಾಜಿಕ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ."

ಸುಮಾರು ನಾಲ್ಕು ವರ್ಷಗಳ ಕೆಳಗೆ ನಮ್ಮ ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಕ್ರಿಶ್ಚಿಯನ್ ಸಮುದಾಯದ ಮೇಲೆ ಮತ್ತು ಅವರ ಪೂಜಾ ಸ್ಥಳಗಳ ಮೇಲೆ ಆಗಿರುವ ಗಂಭೀರವಾದ ಹಲ್ಲೆ ಪ್ರಕರಣಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಹಲ್ಲೆ ನಡೆದ ನಂತರ ಸರ್ಕಾರವು ನ್ಯಾಯಮೂರ್ತಿ ಶ್ರೀ ಬಿ.ಕೆ.ಸೋಮಶೇಖರ್‌ರವರ ನೇತೃತ್ವದಲ್ಲಿ ಆಯೋಗವನ್ನು ರಚಿಸಿದ್ದು, ಆಯೋಗವು ವರದಿಯೊಂದನ್ನು ತಯಾರಿಸಿತ್ತು. ಈ ಆಯೋಗವು ಸುಮಾರು ಎರಡು ವರ್ಷಗಳವರೆಗೆ ವಿಚಾರಣೆ ನಡೆಸಿ ಕೊನೆಗೆ ವರದಿಯೊಂದನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಆದರೆ, ದುರದೃಷ್ಟವಶಾತ್, ಆ ಇಡೀ ವರದಿಯಲ್ಲಿ ಯಾರು ಇದಕ್ಕೆ ಹೊಣೆಗಾರರು? ಯಾರ್ಯಾರ ಮೇಲೆ ಕ್ರಮ ಕೈಗೊಳ್ಳಬೇಕು? ಯಾವ ರೀತಿಯ ಪರಿಹಾರಗಳನ್ನು ನೀಡಬೇಕು? ಇದ್ಯಾವುದರ ಸ್ಪಷ್ಟ ವಿವರಗಳನ್ನಾಗಲಿ, ತೀರ್ಮಾನಗಳನ್ನಾಗಲಿ ನೀಡಲಿಲ್ಲ. ಆಯೋಗದ ವರದಿಯಲ್ಲಿನ ಕೆಲವು ಕಂಡಿಕೆಗಳನ್ನು ತಮ್ಮ ಗಮನಕ್ಕೆ ತರುವುದಾದರೆ, ಇಂತಹ ಗಂಭೀರ ಹಲ್ಲೆಗಳಾದಾಗ ಇದಕ್ಕೆ ಕಾರಣಕರ್ತರು ಯಾರು? ಇದರಲ್ಲಿ ಸರ್ಕಾರವು ಎಷ್ಟರಮಟ್ಟಿಗೆ ಜವಾಬ್ದಾರಿ ವಹಿಸಿಕೊಂಡಿದೆ ಎಂಬುದನ್ನು ನಮ್ಮ ಜನತೆ ಕೇಳಲು ಇಷ್ಟಪಡುತ್ತಾರೆ. ಒಂದು ಕಡೆ ಹೇಳುತ್ತಾರೆ, "There is no basis to the apprehension of Christian petitioners that the politicians, BJP, mainstream Sangh parivar and State

Govt., directly or indirectly, are in-volved in the attacks.' ಪುನಃ ಹೇಳುತ್ತಾರೆ, " However later on the Report observes, 'the plea of many christian memorialists for taking action as per law against Mr. Mahendra kumar, the then Convenor of Bajrang Dal who publicly sought to justify the attacks on Churches is totally justified.' ಮತ್ತೆ ಹೇಳುತ್ತಾರೆ, "The plea that the organizations like Bajrang Dal needs identification and registration for legal control deserves acceptance.' ಮುಂದಕ್ಕೆ ಇನ್ನೊಂದು ಕಡೆಯಲ್ಲಿ ಹೇಳುತ್ತಾರೆ. "On the question of State responsibility once again the Report concludes that the impression and allegation that the top police officers and the district administration had colluded with attackers in attacking the church or places of worship had no merit.' ಎಂದು ಹೇಳುತ್ತಾರೆ. ಮುಂದೆ ಪುನಃ ಹೇಳುತ್ತಾರೆ. "The police action against the christian protestors in several incidents were justified except at St. Sebastian church, permanur, unexplainable excessive and unreasonable and is in violation of the expected norms prescribed. But the same cannot be generalized for all police actions at different locations. It was imprudent, unreasonable and inexperienced act on the part of the police to enter into the premises of some churches in Dakshina Kannada without following legal requirements amounting to violation of religious interests and human rights protected under the Constitution of India.' The Report also states, 'the impressing created incidentally that due to the alleged excesses of the police during the lathi charge ect., in Dakshina kannada incidents, the innocent people

like children, women were also victimized unjustifiably is true in a few instances noted in the report categorically." ಮತ್ತೆ ಪುನಃ ಹೇಳುತ್ತಾರೆ. "The true Hindus have no role to play in any attack directly or indirectly, but the attacks are indulged in by misguided fundamentalists'miscreants of defined or undefined groups or organizations against Christians and christianity who have mistakenly presumed that they would be protected by the party in power with their policies at the relevant time.' The Commission is silent about those miscreants and their identity. The impression created incidentally that due to the alleged excesses of the police during the lathi charge ect., in Dakshina kannada incidents, the innocent people lie children, women were also victimized unjustifiably is true in a few instances noted in the report categorically." ಆದರೆ ಕೊನೆಯ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ."The then SP of Dakshina kannada, Mr.Satish kumar in his cross examination clearly said that the attack was done by the 'Bajrang Dal,' the commission failed to give finding against the Bajrang Dal." ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುವುದು ಏನೆಂದರೆ, ಈ ವರದಿಯು ವಿರೋಧಾಭಾಸಗಳಿಂದ ಕೂಡಿದ ಕೆಲವು conclusions ಅನ್ನು ಕೊಟ್ಟಿದೆ. conclusions ಅನ್ನು ಕೊಟ್ಟು, ಸರ್ಕಾರಕ್ಕೆ ವರದಿಯನ್ನೂ ಸಹ ಕೊಟ್ಟಿದೆ. ಯಾರು ಇದಕ್ಕೆ ಕಾರಣರು? ಸರ್ಕಾರ ಇದಕ್ಕೆ ಎಷ್ಟು ಜವಾಬ್ದಾರಿ? ಎಂಬ ವಿಚಾರವನ್ನು ಜನತೆ ತಿಳಿಯಲಿಕ್ಕೆ ಇಷ್ಟಪಟ್ಟಿದ್ದಾರೆ. ಈ ಅಕ್ಷಮ್ಯ ಅಪರಾಧಗಳನ್ನು ಮಾಡಿದವರ ಮೇಲೆ ಯಾರಾದರೂ ಕ್ರಮ ತೆಗೆದುಕೊಳ್ಳಬೇಕೆಂದು ಜನ ಬಯಸುವಾಗ, ಸರ್ಕಾರ ಏಕೆ ಇದುವರೆಗೂ ಇದರ ಮೇಲೆ ಕ್ರಮ ತೆಗೆದುಕೊಂಡಿಲ್ಲ? ಈಗ ನಮ್ಮ ಹೊಸ ಸರ್ಕಾರ ಖಂಡಿತವಾಗಿ ಇದರ ಬಗ್ಗೆ

ಕ್ರಮ ತೆಗೆದುಕೊಳ್ಳುತ್ತದೆ ಎಂದು ನಮಗೆ ಧೈರ್ಯ ಇದೆ. ಜನತೆಗೆ ಸರ್ಕಾರದ ಮೇಲೆ ಪೂರ್ತಿ ನಂಬಿಕೆ ಹೊರಟು ಹೋಗಿದೆ. ಕಾರಣ ಏನೆಂದರೆ, ಇಷ್ಟೊಂದು ದೊಡ್ಡ ಗಂಭೀರ ಹಲ್ಲೆಯಾದರೂ, ಪೂಜಾ ಸ್ಥಳಗಳ ಮೇಲೆ ಗಂಭೀರ ಹಲ್ಲೆಯಾದರೂ ಕೂಡ, ಸರ್ಕಾರ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದಿದ್ದರೆ, ಸರ್ಕಾರದ ಮೇಲೆ ಇಟ್ಟಿರುವ ನಂಬಿಕೆಯನ್ನು ಯಾವ ರೀತಿಯಲ್ಲಿ ಜನರು ಉಳಿಸಿಕೊಳ್ಳಲಿಕ್ಕೆ ಸಾಧ್ಯ? ಇದು ಮೊದಲನೇ ವಿಚಾರದ ಬಗ್ಗೆ ನಾನು ಈ ಒಂದು ಭಾಷಣದಲ್ಲಿ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಈಗ ಈ ಹೊಸ ಸರ್ಕಾರವು ಖಂಡಿತವಾಗಿ ಇದನ್ನು ಪೂರ್ತಿಯಾಗಿ ತನಿಖೆ ನಡೆಸಿ, ಯಾರು ಇದಕ್ಕೆ ಜವಾಬ್ದಾರರು? ಯಾರು ಅಧಿಕಾರಿಗಳು ಇದಕ್ಕೆ ಕುಮ್ಮಕ್ಕು ಕೊಟ್ಟರು? ಪೊಲೀಸ್‌ನವರು ಎಷ್ಟರಮಟ್ಟಿಗೆ ಇದಕ್ಕೆ support ಕೊಟ್ಟರು? ಯಾರು ವ್ಯಕ್ತಿಗಳು ಇದಕ್ಕೆ ಸಂಬಂಧಪಟ್ಟಿದ್ದಾರೆ? ಯಾವ ಸಂಘಗಳು, ಯಾವ associations, ಯಾವ ರಾಜಕೀಯ ವ್ಯಕ್ತಿಗಳು ಇದಕ್ಕೆ ಕಾರಣರಾದರು? ಇದನ್ನೆಲ್ಲಾ ಪುನಃ ಬಯಲಿಗೆಳೆದು, ಇದರ ಮೇಲೆ ಸ್ಪಷ್ಟವಾದ ತನಿಖೆಯನ್ನು ನಡೆಸಿ, ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸದನವನ್ನು ಆಗ್ರಹಿಸುತ್ತಿದ್ದೇನೆ. ಎರಡನೆಯದಾಗಿ, ನಮ್ಮ ಕರಾವಳಿ ಪ್ರದೇಶದಲ್ಲಿ ವಿವಿಧ moral policingನಿಂದ ಹಲವು incidents ಆಗಿವೆ. ನಿನ್ನೆ ತಾನೇ ನಾನು Times of India ಪೇಪರ್‌ನಲ್ಲಿ ಓದಿದೆ. ಮಧ್ಯಪ್ರದೇಶದಲ್ಲಿ ರಾಜ್ಯಸಭಾ ಪ್ರತಿನಿಧಿಯೊಬ್ಬರು 'ಹೆಣ್ಣುಮಕ್ಕಳು ಜೀನ್ಸ್ ಧರಿಸಬಾರದು, ಹೆಣ್ಣುಮಕ್ಕಳಿಗೆ ಮೊಬೈಲ್ ಕೊಡಬಾರದು' ಎಂಬ ಹೇಳಿಕೆಯನ್ನು ಕೊಟ್ಟಿದ್ದಾರೆ. ಇಂತಹ ಒಂದು ಚಿಂತನೆಯ ಪ್ರವೃತ್ತಿ ಇರುವ, ಇಂತಹ ಒಂದು ಮನಃಸ್ಥಿತಿ ಇರುವವರು, ಇಂತಹ ಜನತೆಯು ನಮ್ಮ ಕರಾವಳಿಯಲ್ಲಿ ನೈತಿಕ ಪೊಲೀಸ್‌ಗಿರಿ ನೆಪದಲ್ಲಿ ಹಲವಾರು ಹಲ್ಲೆಗಳಿಗೆ ಕಾರಣರಾಗಿದ್ದಾರೆ. ಅದರಲ್ಲೂ ಬಹು ಮುಖ್ಯವಾಗಿ ಮಂಗಳೂರು ಪ್ರದೇಶದ brand image ಏನಿತ್ತು, ಅದು ಈ ನೈತಿಕ ಪೊಲೀಸ್‌ಗಿರಿಯಿಂದ ಹಾಳಾಗಲಿಕ್ಕೆ ಸಾಧ್ಯವಾಯಿತು. ಮಂಗಳೂರಿನಲ್ಲಿ ಎಷ್ಟೊಂದು ಮೂಲಭೂತ ಸೌಕರ್ಯಗಳಿವೆ, ಇಲ್ಲಿಗೆ ಬಂಡವಾಳ ಹರಿದು ಬರಬೇಕು, ಉತ್ತಮ ನಗರವಾಗಿ ಅದು ಬೆಳೆಯುವಂತಹ ಲಕ್ಷಣಗಳಿವೆ, ಇಷ್ಟೊಂದು ಹೆಚ್ಚಿನ ಉನ್ನತ ಮಟ್ಟದ ಶಿಕ್ಷಣ ಸಂಸ್ಥೆಗಳಿವೆ, ಆ ಶಿಕ್ಷಣ ಸಂಸ್ಥೆಗಳಿಗೆ

ಹೊರಗಡೆಯಿಂದ ವಿದ್ಯಾರ್ಥಿಗಳು ಬರಬೇಕು, ಆ ಸಂಸ್ಥೆಗಳು ನಡೆಯಬೇಕು. ಇಂತಹ ಒಂದು ಪರಿಸ್ಥಿತಿಯಲ್ಲಿ ಕೆಲವೇ ಕೆಲವು ವ್ಯಕ್ತಿಗಳ ಪ್ರೇರೇಪಣೆಯಿಂದ ನೈತಿಕ ಪೊಲೀಸ್‌ಗಿರಿ ನಡೆದರೆ, ಯಾವ ರೀತಿಯಲ್ಲಿ ಈ ಪ್ರದೇಶಗಳು ಉಳಿಯಲಿಕ್ಕೆ ಅಥವಾ ಅಭಿವೃದ್ಧಿ ಆಗಲಿಕ್ಕೆ ಸಾಧ್ಯ? ಇದೇ ರೀತಿ ಇಡೀ ರಾಜ್ಯದಲ್ಲಿ ಇಂತಹ ನೈತಿಕ ಪೊಲೀಸ್‌ಗಿರಿ ನಡೆದರೆ, ನಮ್ಮ ರಾಜ್ಯದ ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಏನಾಗಬಹುದು? ಆದುದರಿಂದ ನಾನು ಪುನಃ ಈ ಸದನದ ಗಮನವನ್ನು ಸೆಳೆಯಲಿಕ್ಕೆ ಬಯಸುತ್ತಿದ್ದೇನೆ. ಎಲ್ಲಿಯಾದರೂ ನೈತಿಕ ಪೊಲೀಸ್‌ಗಿರಿಯ ಸ್ವಲ್ಪವಾದರೂ ಲಕ್ಷಣಗಳಿದ್ದರೆ, ಅದನ್ನು ಸಂಪೂರ್ಣವಾಗಿ ಮಟ್ಟ ಹಾಕಬೇಕು. ಈ ನೈತಿಕ ಪೊಲೀಸ್‌ಗಿರಿಗೆ ಯಾರು ಪೊಲೀಸ್‌ನವರು ಇದಕ್ಕೆ support ಕೊಡುತ್ತಿದ್ದಾರೋ, ಅಂತಹ ಎಲ್ಲಾ ವ್ಯಕ್ತಿಗಳನ್ನು ಮತ್ತು ಪೊಲೀಸ್‌ನವರನ್ನು ಅಲ್ಲಿಂದ ಪೂರ್ಣವಾಗಿ ವರ್ಗಾಯಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕರೆ ಕೊಡುತ್ತಿದ್ದೇನೆ. ಯಾವುದೇ ಕಾರಣಕ್ಕೂ ನಮ್ಮ ರಾಜ್ಯದಲ್ಲಿ ಈ ನೈತಿಕ ಪೊಲೀಸ್‌ಗಿರಿಯನ್ನು ಬೆಳೆಯಲಿಕ್ಕೆ ಬಿಡಬಾರದಾಗಿ ನನ್ನ ವಿನಂತಿ.

ಮೂರನೆಯದಾಗಿ, ನಾನು ಕಂದಾಯ ಇಲಾಖೆಯ ವಿಚಾರದಲ್ಲಿ ಮಾತನಾಡುತ್ತೇನೆ. ನಮ್ಮ ರಾಜ್ಯದಲ್ಲಿ ಭೂ ಸುಧಾರಣಾ ಕಾನೂನು ಜಾರಿಗೆ ಬಂದು ಸುಮಾರು 40 ವರ್ಷಗಳಾಗುತ್ತಿದೆ. ಇವತ್ತಿಗೂ ಕೂಡ ಕರಾವಳಿ ಪ್ರದೇಶದ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ನಮೂನೆ–7ರ ಅರ್ಜಿಗಳು ಸುಮಾರು 5 ಸಾವಿರ ಅರ್ಜಿಗಳು ಬಾಕಿ ಇವೆ. ಉಚ್ಚ ನ್ಯಾಯಾಲಯಕ್ಕೆ ಹೋಗುತ್ತವೆ, ಮತ್ತೆ ವಾಪಸ್ ಬರುತ್ತವೆ. ಹೀಗಾಗಿ ಬಾಕಿ ಇವೆ. ಉಭಯ ಜಿಲ್ಲೆಗಳಲ್ಲಿ ಫಾರಂ–7ಎ ನಲ್ಲಿ ಕೊಟ್ಟಿರುವಂತಹ ಸುಮಾರು 30 ಸಾವಿರ ಅರ್ಜಿಗಳು ಬಾಕಿ ಇವೆ. ಕಳೆದ ಐದು ವರ್ಷಗಳಲ್ಲಿ ಭೂ ಸುಧಾರಣಾ ಕಾನೂನಿನ ಅಡಿಯಲ್ಲಿ ರಚಿತವಾದ tribunals ಸರಿಯಾಗಿ ಕೆಲಸ ಮಾಡದೆ, ಈ ಅರ್ಜಿಗಳು ಇನ್ನೂ ಕೂಡ ವಿಲೇವಾರಿಯಾಗಿಲ್ಲ. ಇದರಿಂದ ಜನರಿಗೆ ತೊಂದರೆಯಾಗುತ್ತಿದೆ. Eye-sketch ನ ಮೇಲೆ ಹಿಂದೆ ಕೊಟ್ಟಿರುವಂತಹ judgments, ತದನಂತರ ಆಗಿರುವ ಪೋಡಿ ಪ್ರಕರಣಗಳಿಂದ ಆಗಿರುವಂತಹ ನಿಖರವಾದ survey, ಇದು ಒಂದಕ್ಕೊಂದು ತಾಳೆ ಬರದೆ, ಹಲವಾರು ಜನ ರೈತರು ಸಮಸ್ಯೆಗಳಲ್ಲಿ ಸಿಲುಕಿದ್ದಾರೆ. ಅದನ್ನು ಸರಿಪಡಿಸಲೂ

ಕೂಡ ಭೂ ನ್ಯಾಯ ಮಂಡಳಿಗಳಿಲ್ಲ. 40 ವರ್ಷಗಳಾದರೂ ಕೂಡ ನಾವು ಭೂ ಸುಧಾರಣಾ ಕಾನೂನಿನ ಅಡಿಯಲ್ಲಿ ಇರುವಂತಹ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲಿಕ್ಕೆ ಹಿಂದೆ ಬಿದ್ದರೆ, ಅದು ಬಹುಶಃ ಜನರಿಗೆ ಈ ಕರಾವಳಿ ಪ್ರದೇಶದಲ್ಲಿ ನಾವು ಮಾಡುವ ತೊಂದರೆಯಾಗುತ್ತದೆ. ಆದಷ್ಟು ಬೇಗನೆ ಇದನ್ನು ಪರಿಹರಿಸಬೇಕೆಂದು ನಾನು ಕರೆ ಕೊಡುತ್ತಿದ್ದೇನೆ. ಇದರ ಜೊತೆಯಲ್ಲಿ ಕುಮ್ಕಿ ಸಮಸ್ಯೆ ಮತ್ತು ಮೂಲ ಗೇಣಿದಾರರ ಸಮಸ್ಯೆಯನ್ನೂ ಕೂಡ ಪರಿಹರಿಸಬೇಕಾಗಿ ನಾನು ಕೆರೆ ಕೊಡುತ್ತಿದ್ದೇನೆ.

**ಅಧ್ಯಕ್ಷರು :** ಸಮಯವಾಯಿತು, ಬೇಗ ಮುಗಿಸಿ.

**ಶ್ರೀ ಜೆ.ಆರ್.ಲೋಬೋ :–** ಕೊನೆಯದಾಗಿ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಇನ್ನೂ ಹೇಳಬೇಕಾದ ಅನೇಕ ವಿಚಾರಗಳಿವೆ. ಆದರೆ ಒಂದೇ ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಶಿಕ್ಷಣ ಕ್ಷೇತ್ರದಲ್ಲಿ 5,6,8 ಮತ್ತು 9ನೇ ತರಗತಿಯ ಪಠ್ಯ ಪುಸ್ತಕಗಳು ಯಾವುದೋ ಕಾರಣಕ್ಕೆ, ಯಾವುದೋ ಒಂದು ಚಿಂತನೆಯ ಕಾರಣದಿಂದ ಬದಲಾವಣೆಗೊಂಡಿವೆ. ನಾನು ಕರೆ ಕೊಡುತ್ತಿದ್ದೇನೆ, ಎಲ್ಲಾ ಇಂತಹ ಪಠ್ಯಪುಸ್ತಕಗಳನ್ನು ವಾಪಸ್ ತೆಗೆದುಕೊಂಡು, ಎಲ್ಲಾ ಪಠ್ಯಪುಸ್ತಕಗಳ ರಚನಾ ಸಮಿತಿಗಳನ್ನು ಪುನರ್ ರಚಿಸಿ, ಅವುಗಳಿಗೆ ಅತ್ಯುತ್ತಮ ಶಿಕ್ಷಣ ತಜ್ಞರನ್ನು ನೇಮಿಸಬೇಕು. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ಕ್ಕೆ ಅನುಗುಣವಾದ ಉತ್ತಮ ಪಠ್ಯಪುಸ್ತಕಗಳನ್ನು ರಚಿಸಬೇಕು. ಕೇಸರೀಕರಣಗೊಂಡಿರುವ ಪಠ್ಯಪುಸ್ತಕಗಳನ್ನು ದಯವಿಟ್ಟು ಸರ್ಕಾರ ವಾಪಸ್ ಪಡೆಯಬೇಕೆಂದು ನಾನು ಕರೆ ಕೊಡುತ್ತಿದ್ದೇನೆ. ಕಾಲದ ಅಭಾವ ಇರುವುದರಿಂದ ನಾನು ಹೆಚ್ಚು ಮಾತನಾಡಲಿಕ್ಕೆ ಇಷ್ಟಪಡುವುದಿಲ್ಲ.

ಕೊನೆಯದಾಗಿ, ಒಂದೇ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಹಿಂದಿನ ಸರ್ಕಾರದವರು Christian ಸಮುದಾಯಕ್ಕೆ ವರ್ಷಕ್ಕೆ 50 ಕೋಟಿ ರೂ.ಗಳ ಫಂಡ್ ಅನ್ನು ಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು. ಆದರೆ 2011–12ನೇ ಸಾಲಿನಲ್ಲಿ Christian ಸಮುದಾಯಕ್ಕೆ ಆ ಫಂಡ್‌ನಲ್ಲಿ ಕೊಟ್ಟಿರುವುದು ಕೇವಲ 30 ಕೋಟಿ ರೂ.ಗಳು ಮಾತ್ರ. 2012–13ನೇ ಸಾಲಿನಲ್ಲಿ ಅಂದರೆ ಕಳೆದ ವರ್ಷದಲ್ಲಿ ಕೊಟ್ಟಿದ್ದು ಕೇವಲ 12 ಕೋಟಿ ರೂ.ಗಳು ಮಾತ್ರ. ಕೊಟ್ಟಿದ್ದಂತಹ ಭರವಸೆ ಒಂದು, ಈಡೇರಿಸಿದ್ದು ಇನ್ನೊಂದು. ಆದ್ದರಿಂದ, ಇದನ್ನು ಪುನಃ

ಉಳಿಸಿಕೊಳ್ಳಬೇಕಾಗಿ ಕರೆ ಕೊಡುತ್ತೇನೆ. ನಮ್ಮ ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಕಳೆದ ಐದು ವರ್ಷಗಳಿಂದ ಸರಿಗೆ ಮಾತ್ರವೇ ಇದೆ. ಅದರಲ್ಲಿ ಏನೂ ಕೆಲಸವಾಗಿಲ್ಲ. ಅದನ್ನೂ ಕೂಡ ಅಭಿವೃದ್ಧಿಗೊಳಿಸಿ, ಸರಿಪಡಿಸಬೇಕೆಂದು ಹೇಳಿ, ಕಾಲದ ಅಭಾವ ಇರುವುದರಿಂದ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು** :– ಈಗ ಮಾನ್ಯ ರವಿಯವರು ಮಾತನಾಡಬೇಕು. ದಯವಿಟ್ಟು ನೀವು ಕೇವಲ ಐದು ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕು.

**ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು)** : ಮಾನ್ಯ ಅಧ್ಯಕ್ಷರೆ, ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತಾ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೊಸದಾಗಿ ಸರ್ಕಾರ ಬಂದಾಗ ರಾಜ್ಯಪಾಲರ ಭಾಷಣ ಮಾಡಿಸುವುದು ಎಂದರೆ, ಸರ್ಕಾರದ ಆಶಯಗಳನ್ನು ಬಿಂಬಿಸತಕ್ಕಂತಹ ಕೆಲಸ. ತನ್ನ ಗುರಿ ಏನು, ಯಾವ ದಾರಿಯಲ್ಲಿ ಹೋಗುತ್ತೇನೆ ತನ್ನ ಆಶಯಗಳೇನು ಎನ್ನತಕ್ಕಂಥದ್ದನ್ನು ಬಿಂಬಿಸತಕ್ಕಂತಹ ಕೆಲಸ ಮಾಡಬೇಕು. ನಾವು ಹೊಸ ಸರ್ಕಾರಕ್ಕೆ ಪ್ರಶಂಸೆ ಮಾಡುವುದಕ್ಕಾಗಲಿ, ಅಥವಾ ಹೊಸ ಸರ್ಕಾರವನ್ನು ಟೀಕೆ ಮಾಡುವುದಕ್ಕಾಗಲಿ ಇದು ಕಾಲ ಅಲ್ಲ. ಟೀಕೆ ಮಾಡುವುದಕ್ಕೂ ಸಾಕಷ್ಟು ಕಾಲಾವಕಾಶ ಕೊಡಬೇಕಾಗುತ್ತದೆ. ಪ್ರಶಂಸೆ ಮಾಡುವುದಕ್ಕೂ ಕೂಡ result ಅನ್ನು ಕಾದು ನೋಡಬೇಕಾಗುತ್ತದೆ. ಸರ್ಕಾರ ಹೇಗೆ ನಡೆಯುತ್ತದೆ ಎಂದು ಫಲಿತಾಂಶಕ್ಕಾಗಿ ಕಾದು ನೋಡಬೇಕಾಗುತ್ತದೆ. ಹಿಂದಿನ ಸರ್ಕಾರದ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿರುವುದರ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆ ಆಯಿತು. ಸಿರಿಗೆರೆ ಜಗದ್ಗುರುಗಳು ಒಂದು ವಾರದ ಹಿಂದೆ" ವಿಜಯ ಕರ್ನಾಟಕ" ಪತ್ರಿಕೆಯಲ್ಲಿ ಒಂದು ಲೇಖನ ಬರೆದಿದ್ದರು. " ಹೊನ್ನ ಬಿತ್ತಿ ಬೆಳೆಯುವ ವಿದ್ಯೆ" ಬಗ್ಗೆ ಅವರು ಅದರಲ್ಲಿ ಉಲ್ಲೇಖ ಮಾಡಿದ್ದರು. ಒಬ್ಬ ಕಳ್ಳ ಸೆರೆ ಸಿಗುತ್ತಾನೆ, ಅವನಿಗೆ ಗಲ್ಲು ಶಿಕ್ಷೆ ವಿಧಿಸುತ್ತಾರೆ. ನಾನು ಅದನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಅವನಿಗೆ ಗಲ್ಲು ಶಿಕ್ಷೆ ವಿಧಿಸಿ ಗಲ್ಲಿಗೆ ಹಾಕುವಾಗ 'ನಿನ್ನ ಕೊನೆಯ ಆಸೆ ಏನು'? ಎಂದು ಕೇಳುತ್ತಾರೆ. ಆ ಕಥೆಯನ್ನು ಅವರು ಅಲ್ಲಿ ವಿವರಿಸಿದ್ದಾರೆ. ನಿನ್ನ ಕೊನೆಯ ಆಸೆ ಏನೆಂದು ಕೇಳಿದರೆ ಅವನು ಏನು ಹೇಳುತ್ತಾನೆ ಆದರೆ, ನನಗೆ ಒಂದು ವಿದ್ಯೆ ಗೊತ್ತಿದೆ, ಆ ವಿದ್ಯೆಯನ್ನು ನಾನು ಮಹಾರಾಜರಿಗೆ ತಿಳಿಸಬೇಕು.

ಮಹಾರಾಜರ ಹತ್ತಿರ ನನ್ನನ್ನು ಕರೆದುಕೊಂಡು ಹೋಗಿ' ಎಂದು ಹೇಳಿದ. ಮಹಾರಾಜರ ಹತ್ತಿರ ಅವನನ್ನು ಕರೆದುಕೊಂಡು ಹೋಗುತ್ತಾರೆ. ಅವನು, 'ನನಗೆ ಬಂಗಾರ ಬಿತ್ತಿ ಬೆಳೆಯತಕ್ಕಂತಹ ವಿದ್ಯೆ ಗೊತ್ತಿದೆ. ಅದನ್ನು ನಿಮಗೆ ಹೇಳಬೇಕೆಂದು ಕಾಯುತ್ತಿದ್ದೆ ಆ ವಿದ್ಯೆಯನ್ನು ನಿಮಗೆ ತಿಳಿಸಬೇಕು. ಎಂದು ಹೇಳುತ್ತಾನೆ. ಅರಮನೆ ಮುಂದೆ ಇದ್ದ ಟಾರ್ ತೆಗೆಸಿ ಭೂಮಿ ಎಲ್ಲಾ ರೆಡಿ ಮಾಡಿಸುತ್ತಾರೆ, ಬಂಗಾರದ ಬೀಜಗಳನ್ನೂ ತರಿಸುತ್ತಾರೆ, 'ಬಿತ್ತು ಬಂಗಾರ' ಎಂದು ಹೇಳುತ್ತಾರೆ. ಅವನು, 'ನಾನು ಕಳ್ಳ. ಇದನ್ನು ನಾನು ಬಿತ್ತುವುದಕ್ಕಾಗುವುದಿಲ್ಲ, ಮಹಾರಾಜರು ತಾವು ಬಿತ್ತಬೇಕು. ಇದನ್ನು ಯಾರು ಸಂಪನ್ನರು ಇರುತ್ತಾರೆ, ಅವರು ಬಿತ್ತಿದರೆ ಮಾತ್ರ ಮೊಳಕೆ ಯೊಡೆದು ಫಸಲು ಬರುತ್ತದೆ. ತಾವು ಮಹಾರಾಜರಿದ್ದೀರಿ, ತಾವು ಬಿತ್ತಬೇಕು'. ಎಂದು ಹೇಳುತ್ತಾನೆ. ಮಹಾರಾಜರು, 'ಇಲ್ಲ ಇಲ್ಲ, ನಾನು ಸಣ್ಣ ಹುಡುಗ ಇದ್ದಾಗ ನಾನೂ ಕೂಡ ಕದ್ದಿದ್ದೆ, ನಾನು ಬಿತ್ತುವುದಕ್ಕಾಗುವುದಿಲ್ಲ.' ಎಂದು ಹೇಳುತ್ತಾರೆ. ಮಹಾರಾಜರು ಬಿತ್ತುವುದಕ್ಕಾಗುವುದಿಲ್ಲವೆಂದರೆ, ರಾಜ ಪುರೋಹಿತರು ಇದ್ದಾರೆ ಅವರು ಬಿತ್ತಿದರೆ ಬಿತ್ತಬಹುದು ಎಂದು ರಾಜ ಪುರೋಹಿತರ ಕಡೆಗೆ ತೋರಿಸುತ್ತಾನೆ. ರಾಜ ಪುರೋಹಿತರು,'ನಾನು ಪ್ರಸಾದ ಇಟ್ಟಿದ್ದನ್ನೇ ಕದ್ದು ತಿಂದಿದ್ದೆ, ಆದ್ದರಿಂದ ನಾನೂ ಬಿತ್ತುವುದಕ್ಕಾಗುವುದಿಲ್ಲ.' ಎಂದು ಹೇಳುತ್ತಾನೆ. ಹೀಗೆ ಮಂತ್ರಿ, ಸೇನಾಧಿಪತಿ ಹಾಗೂ ಊರ ಜನ ಎಲ್ಲರೂ ಹೇಳಿದಾಗ ಒಂದಲ್ಲ ಒಂದು ರೀತಿಯಲ್ಲಿ ಕಳ್ಳತನ ಮಾಡಿದವರೇ ಇರುತ್ತಾರೆ. ಹಾಗಿದ್ದಾಗ, ಹಿಂದಿನ ಸರ್ಕಾರದ ಬಗ್ಗೆ ಹೇಳಿದರು. ಈ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಭ್ರಷ್ಟಾಚಾರದ ಬೀಜವನ್ನು ಬಿತ್ತಿದ್ದು ಯಾರು? ಅತಿ ಹೆಚ್ಚು ಆಡಳಿತ ಮಾಡಿದಂತಹ ಪಕ್ಷ ಕಾಂಗ್ರೆಸ್. ಮುಂಡ್ರಾ ಜೀಪ್ ಹಗರಣ ಪ್ರಾರಂಭವಾಗಿದ್ದು ಮಾನ್ಯ ಜವಾಹರಲಾಲ್ ನೆಹರೂರವರು ಪ್ರಧಾನ ಮಂತ್ರಿಯಾಗಿದ್ದಾಗ.

(ಗೊಂದಲ)

**ಶ್ರೀ ವೈ.ಎನ್.ರುದ್ರೇಶ್‌ಗೌಡ** : ಭ್ರಷ್ಟಾಚಾರ ಕಲಿಸಿದವರೇ BJPಯವರು.

**ಶ್ರೀ ಸಿ.ಟಿ.ರವಿ** : R.P. scam ಹಗರಣ ಪ್ರಾರಂಭವಾದಾಗ ನಾವು ಇರಲಿಲ್ಲ. ನಾನು ಉದಾಹರಣೆಗೆ ಹೇಳಿದೆ. ಯೂರಿಯಾ ಹಗರಣ, ಉಪ್ಪಿನಕಾಯಿ ಪಾತಕ್ ಹಗರಣ, ಸಕ್ಕರೆ ಹಗರಣ,. ಬೋಫೋರ್ಸ್

ಹಗರಣ,2G, 3G, ಕಲ್ಲಿದ್ದಲು, ಕೋಲ್ಗೇಟ್ ಹಗರಣ, ಇವೆಲ್ಲವೂ ಹೇಗಿದೆ ಎಂದರೆ, 100 still not out-UPA Government. 100 ಹಗರಣಗಳು ಮಾಡಿದ ನಂತರವೂ...

**ಅಧ್ಯಕ್ಷರು** : ಮಾನ್ಯ ರವಿ ಅವರೆ, ದಯವಿಟ್ಟು ಅವುಗಳನ್ನೆಲ್ಲಾ ಹೇಳಬೇಡಿ. ಅವರು ಯಾರೂ ಉತ್ತರ ಕೊಡುವುದಕ್ಕೆ ಇಲ್ಲಿ ಇಲ್ಲ. ದಯವಿಟ್ಟು ಪ್ರಸ್ತಾಪ ಮಾಡಬೇಡಿ. ದಯವಿಟ್ಟು ನೀವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ. No. No. Please, ಅವರು ಯಾರೂ ಇಲ್ಲ. ಉತ್ತರ ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

**ಶ್ರೀ ಸಿ.ಟಿ. ರವಿ** : ಅಧ್ಯಕ್ಷರೆ, ಭ್ರಷ್ಟಾಚಾರದ ಬಗ್ಗೆ ರಾಜ್ಯಪಾಲರ ಮೂಲಕ ಈ ಸರ್ಕಾರ ಹೇಳಿಸಿತ್ತು. ಅದಕ್ಕೆ ನಾನು ಹೇಳಿದ್ದು, ಹೊನ್ನ ಬಿತ್ತಿ ಬೆಳೆದವರಂತಹ ಪ್ರಾಮಾಣಿಕರು ಯಾರು ಎಂದು?

**ಅಧ್ಯಕ್ಷರು** : ನೀವು ಸಮಯ ಕಳೆದುಕೊಳ್ಳುತ್ತೀರಿ, ನಾನು adjourn ಮಾಡುತ್ತೇನೆ.

(ಗೊಂದಲ)

**ಅಧ್ಯಕ್ಷರು** : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಸಿ.ಟಿ.ರವಿ** : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮನದಾಳದ ಮಾತನ್ನು ಸಂವಾದದಲ್ಲಿ ಬಿಟ್ಟಿದ್ದರು. ಆ ಮನದಾಳದ ಮಾತು ಬಿಚ್ಚಿಟ್ಟಿದ್ದು ಏನೆಂದರೆ, ಇವತ್ತಿನ ವ್ಯವಸ್ಥೆಯಲ್ಲಿ ಯಾರೂ ಕೂಡ ಪ್ರಾಮಾಣಿಕವಾಗಿ ಇರುವುದು ಕಷ್ಟ.

**ಒಬ್ಬ ಮಾನ್ಯ ಸದಸ್ಯರು** : ಮೋದಿ ಬಗ್ಗೆ ಪ್ರಸ್ತಾಪ ಮಾಡಿದಾಗ ನೀವು ಕಡತದಿಂದ ತೆಗೆಸಿದ್ದೀರಿ. ಅವರು ಪುರಾವೆ ಸಾಕ್ಷ್ಯಾಧಾರ ಇಲ್ಲದೆ ಆರೋಪ ಮಾಡಿದ್ದಾರೆ. ದಯವಿಟ್ಟು ಕಡತದಿಂದ ತೆಗೆದು ಹಾಕಿ.

**ಅಧ್ಯಕ್ಷರು** : Un-parliamentary ಆಗಿದ್ದರೆ ನಾನೇ ಕಡತದಿಂದ ತೆಗೆಸಿ ಹಾಕುತ್ತೇನೆ.

**ಶ್ರೀ ಸಿ.ಟಿ. ರವಿ** : ಮಾನ್ಯ ಅಧ್ಯಕ್ಷರೆ, ಮನದಾಳದ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಬಿಚ್ಚಿಟ್ಟಿದ್ದರು. ಇವತ್ತಿನ ವ್ಯವಸ್ಥೆಯಲ್ಲಿ

ಪ್ರಾಮಾಣಿಕವಾಗಿರುವುದು ಕಷ್ಟ. ಉಪ ಚುನಾವಣೆಯಲ್ಲಿ ಜನತಾ ದಳಕ್ಕೆ ರಾಜೀನಾಮೆ ಕೊಟ್ಟು ಕಾಂಗ್ರೆಸ್ ಪಕ್ಷದಿಂದ ಚುನಾವಣೆಗೆ ನಿಂತುಕೊಂಡಾಗ ಅನುಭವಿಸಿದ ಯಾತನೆ ಅದನ್ನೆಲ್ಲಾ ಹೇಳುತ್ತಾ, ಹಣ ಹೇಗೆ ರಾಜಕೀಯದಲ್ಲಿ ಕೆಲಸ ಮಾಡುತ್ತದೆ, ಹೇಗೆ Compromise ಮಾಡಿಕೊಳ್ಳಬೇಕಾಗಿ ಬಂತು ಎಂದು ತಮ್ಮ ಮನದಾಳದ ಮಾತನ್ನು ಬಿಚ್ಚಿಟ್ಟಿದ್ದರು. " ಹೊನ್ನ ಬಿತ್ತಿ ಬೆಳೆದವರುಂಟೆ" ಎನ್ನುವ ರೀತಿಯಲ್ಲಿ ಪ್ರಾಮಾಣಿಕರು ಯಾರು ಎಂದು ನಾವು ನಮ್ಮ ಆತ್ಮ ಪರೀಕ್ಷೆ ಮಾಡಿಕೊಳ್ಳಬೇಕಾಗುತ್ತದೆ. ನಾವು ನಮ್ಮ ಆತ್ಮಕ್ಕೆ ನಾನೆಷ್ಟು ಪ್ರಾಮಾಣಿಕ ಎಂದು ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದೆ. ರಾಜ್ಯಪಾಲರ ಕೈಯಲ್ಲಿ ಭಾಷಣ ಹೇಳಿಸಬೇಕಾದರೆ, ನಾನು ನನ್ನ ಪಾರ್ಟಿ ಎಷ್ಟು ಪ್ರಾಮಾಣಿಕ? ಎನ್ನುವುದನ್ನು ಆತ್ಮ ಪರೀಕ್ಷೆ ಮಾಡಿಕೊಂಡು, ಅವರಿಗೆ ಆತ್ಮದಲ್ಲಿ ನಾನು ನೂರಕ್ಕೆ ನೂರು ಶುದ್ಧನಿದ್ದೇನೆ ಎಂದು ಅನ್ನಿಸಿ ರಾಜ್ಯಪಾಲರ ಮೂಲಕ ಭಾಷಣ ಮಾಡಿಸಿದರೆ, ಅದಕ್ಕೂ ಒಂದು ಅರ್ಥ ಇರುತ್ತಿತ್ತು. ಹಾಗೆ ಏನೂ ಇಲ್ಲದೆ, ಯಾರು ಭ್ರಷ್ಟಾಚಾರದ ಬೀಜವನ್ನು ಬಿತ್ತಿದ ಪಾರ್ಟಿ ಇದೆಯೋ ಅದೇ ಪಾರ್ಟಿ ಅಧಿಕಾರಕ್ಕೆ ಬಂದಾಗ ರಾಜ್ಯಪಾಲರ ಹತ್ತಿರ ಭಾಷಣ ಮಾಡಿಸಿರುವುದು ಒಂದು ರೀತಿಯಲ್ಲಿ ಒಂದಕ್ಕೊಂದಕ್ಕೆ ಸಂಬಂಧ ಇಲ್ಲದೆ ಇರತಕ್ಕಂತಹ ತದ್ವಿರುದ್ಧವಾಗಿರತಕ್ಕಂಥದ್ದು ಎನ್ನುವುದನ್ನು ನೆನಪು ಮಾಡಿಕೊಡುವುದಕ್ಕೆ ಅಷ್ಟೇ ಹೇಳಿದೆ.KPSC ಬಗ್ಗೆ ಚರ್ಚೆ ಆಯಿತು.KPSC ಬಗ್ಗೆ ಚರ್ಚೆಯಾಗಿ ಯಾವ ರೀತಿ ನಡೆಯುತ್ತದೆ ಎಂದು ಹೇಳಿದರು. KPSCಗೆ ಸದಸ್ಯರನ್ನು ನೇಮಕ ಮಾಡುವಾಗಲೇ ಜಾತಿ ಆಧಾರದ ಮೇಲೆ ನೇಮಕ ಮಾಡುತ್ತೀರಿ. ಅವನು ಜಾತಿ ಮಾಡದೆ ಇನ್ನೇನು ಮಾಡುತ್ತಾನೆ? ಹೆಣ್ಣು ಕೊಡಿಸಿದರೆ ಕೆಲಸ, ದುಡ್ಡು ಕೊಟ್ಟರೆ ಕೆಲಸ, KPSC ಸದಸ್ಯರನ್ನು ಸೆಲೆಕ್ಟ್ ಮಾಡುವಾಗಲೇ ಪೇಮೆಂಟ್ ಕೋಟಾ, ರಿಸರ್ವೇಷನ್ ಕೋಟಾ ಎಂದು ಮಾಡಿರುತ್ತೇವೆ. ಮೆರಿಟ್ ಕೋಟಾಗೆ ಆದ್ಯತೆಯೇ ಕಡಿಮೆ. ಮೆರಿಟ್ ಕೋಟಾ ತೆಗೆದುಕೊಳ್ಳುವುದು ಬಹಳ ಕಡಿಮೆ. ರಿಸರ್ವೇಷನ್ ಕೋಟಾ ಮತ್ತು ಪೇಮೆಂಟ್ ಕೋಟಾದವರನ್ನೇ KPSC ಸದಸ್ಯರನ್ನಾಗಿ ನೇಮಕ ಮಾಡಿಕೊಂಡರೆ, ನಾವು ಅಲ್ಲಿ ಆಯ್ಕೆ ಮಾಡುವಾಗಲೇ ದುಡ್ಡು ತೆಗೆದುಕೊಂಡು ಆಯ್ಕೆ ಮಾಡುವ ವ್ಯವಸ್ಥೆಯನ್ನು ನಿರ್ಮಾಣ ಮಾಡಿದರೆ, ಅಲ್ಲಿ ಶುದ್ಧ ಆಗುವುದು ಹೇಗೆ? ನಾನು ಯಾವುದೇ ವ್ಯಕ್ತಿ ಬಗ್ಗೆ ಹೇಳುತ್ತಿಲ್ಲ.

(ಗೊಂದಲ)

**ಅಧ್ಯಕ್ಷರು** : ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆಂದು ಕೇಳದೆ ಈ ರೀತಿ ಮಾತನಾಡಿದರೆ ಹೇಗೆ? ಅವರು ಏನು ಹೇಳುತ್ತಿದ್ದಾರೆಂದು ಕೇಳಿಸುತ್ತಿಲ್ಲ.

**ಶ್ರೀ ಸಿ.ಟಿ.ರವಿ** : ನಾನು SC/ST ಮೀಸಲಾತಿ ಬಗ್ಗೆ ಹೇಳುತ್ತಿಲ್ಲ.

**ಅಧ್ಯಕ್ಷರು** : ಈ ತರಹ ಆದರೆ, ಅವರು ಹೇಳುವುದೂ ಕೇಳುವುದಿಲ್ಲ, ನೀವು ಹೇಳುವುದೂ ಕೇಳುವುದಿಲ್ಲ.

**ಶ್ರೀ ಸಿ.ಟಿ.ರವಿ** : ಮಾನ್ಯ ಅಧ್ಯಕ್ಷರೆ, ನಾನು ಸಂವಿಧಾನ ದತ್ತವಾದ ಮೀಸಲಾತಿ ಬಗ್ಗೆ ಹೇಳುತ್ತಿಲ್ಲ.

**ಅಧ್ಯಕ್ಷರು** : ರವಿ ಅವರೇ, ನಿಮ್ಮ ಸಮಯ ಆಗುತ್ತಿದೆ, ನಾನು ಮುಕ್ತಾಯ ಮಾಡುತ್ತೇನೆ.

**ಶ್ರೀ ಸಿ.ಟಿ.ರವಿ** : ಮಾನ್ಯ ಅಧ್ಯಕ್ಷರೆ, ನಾನು ಸಂವಿಧಾನ ದತ್ತವಾಗಿರುವ ಮೀಸಲಾತಿ ಪ್ರಶ್ನೆ ಮಾಡುತ್ತಿಲ್ಲ. ಸಮಾಜದಲ್ಲಿ ಜಾತಿ ಆಧಾರದಲ್ಲಿ ಕೊಡುತ್ತಿರತಕ್ಕಂತಹ ಮೀಸಲಾತಿ ಬಗ್ಗೆ ಹೇಳುತ್ತಿದ್ದೇನೆ. ನಾನು ಆ ಮೀಸಲಾತಿ ಬಗ್ಗೆ ಪ್ರಶ್ನೆ ಮಾಡುತ್ತಿದ್ದೇನೆ. ಜಾತಿ ಹೆಸರಿನ ಮೇಲೆ KPSC ಗೆ ನೇಮಕ ಮಾಡಿರತಕ್ಕಂತಹ ಮೀಸಲಾಗಿ ಬಗ್ಗೆ ಹೇಳುತ್ತಿದ್ದೇನೆ.

**ಅಧ್ಯಕ್ಷರು** : ಅವರು ಹೇಳುತ್ತಿದ್ದಾರೆ ಸುಮ್ಮನಿರಿ. ನೀವು ಹೇಳಬೇಕಾದಾಗ ನೀವು ಹೇಳಿ, ಅವರು ಹೇಳಬೇಕಾದಾಗ ಅವರು ಹೇಳುತ್ತಾರೆ. ಮೀಸಲಾತಿ ಕೊಡುವುದು ರಾಜ್ಯಾಂಗದಲ್ಲಿದೆ, ರಾಜ್ಯಾಂಗದ ಪ್ರಕಾರ ಕೊಟ್ಟಿರುತ್ತಾರೆ.

**ಶ್ರೀ ಸಿ.ಟಿ.ರವಿ** : ಮಾನ್ಯ ಅಧ್ಯಕ್ಷರೆ, ಒಂದು ಕಾಲದಲ್ಲಿ ಲಿಕ್ಕರ್ ಮಾಫಿಯಾ ಬಗ್ಗೆ ಚರ್ಚೆಯಾಗುತ್ತಿತ್ತು. ರಾಜಕೀಯ ಪಕ್ಷಗಳಿಗೆ ಹಾಗೂ ರಾಜಕೀಯ ವ್ಯಕ್ತಿಗಳಿಗೆ ಯಾವ ಲಿಕ್ಕರ್ ಮಾಫಿಯಾ ಸಪೋರ್ಟ್ ಮಾಡುತ್ತದೋ ಆ ಮಾಫಿಯಾದ ನೆರವು ಪಡೆದುಕೊಂಡು ಇವರು ಅಧಿಕಾರಕ್ಕೆ ಬರುವ ವ್ಯವಸ್ಥೆ ಇತ್ತು. ಲಿಕ್ಕರ್ ಮಾಫಿಯಾ ಆಗುತ್ತಿದ್ದ ಹಾಗೆ ಟಿಂಬರ್ ಮಾಫಿಯಾ ಬಂತು. ನಮ್ಮ ಭಾಗದಲ್ಲಿ ದೊಡ್ಡ ದೊಡ್ಡ ಕಾಡುಗಳನ್ನು ಕಡಿದು ಟಿಂಬರ್ ಮಾಫಿಯಾಕ್ಕೆ ಸಹಾಯ ಮಾಡಿದಂತಹ, ಟಿಂಬರ್ ಮಾಫಿಯಾ ಬೆಂಬಲ ಇರುವವರು ಅಧಿಕಾರಕ್ಕೆ ಬರುವಂತಹ ಒಂದು ವ್ಯವಸ್ಥೆ ನಿರ್ಮಾಣವಾಯಿತು. ಆದಾದ ಮೇಲೆ ಶಿಕ್ಷಣ ಇದು ಒಂದು ಸೇವಾ ಕಾರ್ಯ

ಹೋಗಿ, ಅದೊಂದು ಮಾಫಿಯಾ ಆಗಿ ಬದಲಾಗಿ, ಶೈಕ್ಷಣಿಕ ಕ್ಷೇತ್ರವೂ ಕೂಡ ಒಂದು ಮಾಫಿಯಾ ಆಗಿ ನಾವು ಬದಲಾಯಿಸಿದ್ದೇವೆ. ಈಗ ಲ್ಯಾಂಡ್ ಮಾಫಿಯಾ, ಮೈನ್ಸ್ ಮಾಫಿಯಾ....

**ಅಧ್ಯಕ್ಷರು** : ಅವರು ಏನು ಹೇಳುತ್ತಾರೆ ಕೇಳಿ. ಅದು un-parliamentary ಅಲ್ಲ ಕುಳಿತುಕೊಳ್ಳಿ.

**ಶ್ರೀ ಸಿ.ಟಿ.ರವಿ** : ನಾನು ಯಾರನ್ನೂ ವ್ಯಕ್ತಿಗತವಾಗಿ ಟೀಕೆ ಮಾಡುತ್ತಿಲ್ಲ. ವ್ಯವಸ್ಥೆಯಲ್ಲಿರುವಂಥ ದೋಷವನ್ನು ಹೇಳುತ್ತಿದ್ದೇನೆ, ಈಗ ನಾನು ಯಾರನ್ನು ವ್ಯಕ್ತಿಗತವಾಗಿ ಟೀಕೆ ಮಾಡುತ್ತಿಲ್ಲ. ಲ್ಯಾಂಡ್ ಮಾಫಿಯಾ, ಮೈನ್ಸ್ ಮಾಫಿಯಾ,,,

(ಗೊಂದಲ)

**ಅಧ್ಯಕ್ಷರು** : ಎಲ್ಲರೂ ಕುಳಿತುಕೊಳ್ಳಿ, ನೀವು ಹೇಳಿದ ಹಾಗೆಯೇ ಅವರು ಹೇಳಬೇಕೆ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಸಿ.ಟಿ.ರವಿ** : ಮಾನ್ಯ ಅಧ್ಯಕ್ಷರೆ, ನಾನು ಜನರಲ್ ಆಗಿ ಹೇಳುತ್ತಿದ್ದೇನೆಯೇ ಹೊರತು ಯಾರನ್ನೂ ಪರ್ಟಿಕ್ಯುಲರ್ ಆಗಿ ಇವರು ಲ್ಯಾಂಡ್ ಮಾಫಿಯಾ ಇವರು ಮೈನ್ಸ್ ಮಾಫಿಯಾ ಎಂದು ನಾನು ಹೇಳುತ್ತಿಲ್ಲ. ನಾನು ಈ ವ್ಯವಸ್ಥೆ ಬಗ್ಗೆ ಹೇಳುತ್ತಿದ್ದೇನೆ. ವ್ಯವಸ್ಥೆ ಬಗ್ಗೆ ಹೇಳಿದರೆ ಇವರು ಹೀಗೇಕೆ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಈಗ ಮತೀಯವಾದ ಆಡಳಿತದಲ್ಲಿ ಇರಬಾರದು ಎನ್ನುವುದರ ಬಗ್ಗೆ ಲೋಬೋರವರು ಕೂಡ ಮಾತನಾಡುತ್ತಾ ಹೇಳಿದ್ದಾರೆ. ಮತೀಯವಾದ ಆಡಳಿತದಲ್ಲಿ ಇರಬಾರದು, ಶಿಕ್ಷಣದಲ್ಲಿ ಇರಬಾರದು ಎಂದು ಹೇಳಿದ್ದಾರೆ. ನಾವು ಸೆಕ್ಯುಲರ್ ಎಂದು ಹೇಳಿಕೊಳ್ಳತಕ್ಕಂಥ ರಾಜಕೀಯ ಪಕ್ಷಗಳು, ನಮ್ಮ ರಕ್ತವೇ ಸೆಕ್ಯುಲರ್ ಎಂದು ಹೇಳತಕ್ಕಂಥ ರಾಜಕೀಯ ನೇತಾರರು, ಮಾತೆತ್ತಿದರೆ ಸೆಕ್ಯುಲರ್ ರಾಜಕಾರಣದ ಬಗ್ಗೆ ಮಾತನಾಡತಕ್ಕಂಥ ಮುಖ್ಯಮಂತ್ರಿಗಳು ಒಂದು ಸಭೆಯಲ್ಲಿ ಮಾತನಾಡುತ್ತಾ ಹೇಳಿದರು, ನಾವು ಗೃಹ ಸಚಿವರನ್ನಾಗಿ ಜಾರ್ಜ್‌ರವರನ್ನು ಮಾಡಿದ್ದು, ಅಲ್ಪಸಂಖ್ಯಾತರ ಹಿತರಕ್ಷಣೆಗೋಸ್ಕರ ಅವರನ್ನು ಮಾಡಿದ್ದೇವೆ, ಆ ಮೂಲಕ ಒಂದು ಸಂದೇಶವನ್ನು ಕೊಟ್ಟಿದ್ದೇವೆ ಎಂದಿದ್ದಾರೆ. ಹಾಗಾದರೆ ಬಹು ಸಂಖ್ಯಾತರ ಹಿತರಕ್ಷಣೆಯನ್ನು ಮಾಡುವವರು ಯಾರು? ಅವರು ಅಲ್ಪಸಂಖ್ಯಾತರಿಗೆ Home Minister ಮಾಡಿದ್ದಾರೆ. ಅಲ್ಪಸಂಖ್ಯಾತರಿಗೆ ಅವರು Home Minister ಆದರೆ ಬಹು ಸಂಖ್ಯಾತರಿಗೆ ಯಾರು Home Minister?

ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ಮೂಲಕ ಕೇಳುತ್ತೇನೆ, ಅವರು ಅಲ್ಪಸಂಖ್ಯಾತರಿಗೆ Home Minister ರವರನ್ನು ಮಾಡಿದ್ದಾರೆ. ಬಹುಸಂಖ್ಯಾತರಿಗೋಸ್ಕರ Home Minister ಯಾರು ಎಂದು ಕೇಳುತ್ತೇನೆ.

(ಗೊಂದಲ)

**ಅಧ್ಯಕ್ಷರು** :– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಸಿ.ಟಿ.ರವಿಯವರು ಏನು ಹೇಳುತ್ತಾರೆ ಕೇಳಿಸಿಕೊಳ್ಳಿ.

(ಗೊಂದಲ)

**ಶ್ರೀ ಸಿ.ಟಿ.ರವಿ** :– ಮಾನ್ಯ ಅಧ್ಯಕ್ಷರೆ, ಅಲ್ಪಸಂಖ್ಯಾತರ ಹಿತರಕ್ಷಣೆಗೆ ಗೃಹ ಸಚಿವರಿದ್ದಾರೆ. ಬಹುಸಂಖ್ಯಾತರ ರಕ್ಷಣೆಗೂ ಒಬ್ಬ ಗೃಹ ಸಚಿವರನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ.

(ಗೊಂದಲ)

**ಅಧ್ಯಕ್ಷರು** :– ಈಗ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಕ್ತಾಯವಾಗಿದೆ. ಈಗ ಸಭೆಯನ್ನು ಮುಂದೂಡಿ ಮತ್ತೆ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸದನ ಸಮಾವೇಶಗೊಳ್ಳುತ್ತದೆ.

**(ಸದನವು ಮಧ್ಯಾಹ್ನ 2 ಗಂಟೆ 12 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಪುನರ್ ಸಮಾವೇಶಗೊಳ್ಳಲು ನಿಶ್ಚಯಿತು.)**

(ಸದನವು ಭೋಜನದ ವಿರಾಮದ ನಂತರ 2 ಗಂಟೆ 53 ನಿಮಿಷಕ್ಕೆ ಪ್ರಾರಂಭವಾಯಿತು, ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

**ಶ್ರೀ ಹೆಚ್.ಡಿ.ರೇವಣ್ಣ** : ಮಾನ್ಯ ಸಭಾಧ್ಯಕ್ಷರೆ, ನಾಯಕರು ಬರುವವರೆಗೂ ಒಂದು 5–6 ಜನರು ಮಾತನಾಡುತ್ತೇವೆ.

**ಅಧ್ಯಕ್ಷರು** : ಈಗ ಸಭಾ ನಾಯಕರು ಬಂದು ರಿಪ್ಲೈ ಕೊಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ 11.00 ಗಂಟೆಗೆ ರಿಪ್ಲೈ ಕೊಡಬೇಕಾಗಿತ್ತು.

(ಗೊಂದಲ)

**ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು)** : ಮಾನ್ಯ ರೇವಣ್ಣನವರೇ, ಇವತ್ತು agenda ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾಗಿತ್ತು.

(ಗೊಂದಲ)

**ಶ್ರೀ ಹೆಚ್.ಡಿ.ರೇವಣ್ಣ :** ಮಾನ್ಯ ದೇಶಪಾಂಡೆಯವರಿಗೆ ನನ್ನ ಮೇಲೆ ಏತಕ್ಕಾಗಿ ಕೋಪ ಇದೆ? ನಿಮಗೆ ಸಿಟ್ಟು ಇದ್ದರೆ ಏನಾದರೂ ಮಾಡಿಬಿಡಿ. ಮೇಷ್ಟ್ರುಗಳೆಲ್ಲರನ್ನು ತೆಗೆದು deputation ತೆಗೆದು ಕಾಲೇಜುಗಳ ಬಾಗಿಲುಗಳನ್ನು ಮುಚ್ಚುವಂತಹ ಪರಿಸ್ಥಿತಿ ಬಂದಿದೆ. ಅದರ ಬಗ್ಗೆ ಮಾನ್ಯ ದೇಶಪಾಂಡೆಯವರಿಗೆ ಹೇಳಬೇಕೆಂದು ಇದ್ದೆ. ಇಂಜಿನಿಯರಿಂಗ್ ಕಾಲೇಜುಗಳೆಲ್ಲವೂ ಬಾಗಿಲು ಮುಚ್ಚುವಂತಹ ಪರಿಸ್ಥಿತಿ ಬಂದಿದೆ. ಈಗ ಹಾಲಿನ ರೇಟ್ ಅನ್ನು ಜಾಸ್ತಿ ಮಾಡಿ 4.00 ರೂಪಾಯಿಗಳಿಗೆ ಕೊಡುವುದಾಗಿ ಮಾಡಿ ಸುಮಾರು 54 ಲಕ್ಷ ಲೀಟರ್ ಹಾಲು ಬಂದು ಇನ್ನೊಂದು ವಾರದಲ್ಲಿ ರೋಡ್‌ಗೆ ತಂದು ಸುರಿಯಬೇಕಾಗುತ್ತದೆ. ಅದಕ್ಕೇನು ಮಾಡುತ್ತೀರೆಂದಾದರೂ ಹೇಳಬೇಕಲ್ಲವೇ? ಮಕ್ಕಳಿಗೆ ಹಾಲನ್ನು ಕುಡಿಯುವುದಕ್ಕಾದರೂ ಕೊಡಿ ಎಂದು ಹೇಳಬೇಕಲ್ಲವೇ? ಈಗ ಸುಮಾರು 54 ಲಕ್ಷ ಲೀಟರ್ ಹಾಲು ಬರುತ್ತಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣದ ಮೇಲೆ ಉತ್ತರವನ್ನು ಕೊಡುವಾಗ ಹೇಳಬೇಕು. ಇದು ಅಲ್ಲದೆ ಆ ಭಾಗದ ಕಾವೇರಿ ನೀರಿನ ಬಗ್ಗೆ ಅಳಿವು ಮತ್ತು ಉಳಿವಿನ ಬಗ್ಗೆ ತಾವು ಹೇಳಬೇಕು.

**ಅಧ್ಯಕ್ಷರು :** ಅದನ್ನು ದಯವಿಟ್ಟು ನೀವು ಅವರು ಕುಳಿತುಕೊಂಡು ಸ್ವಲ್ಪ ಮಾತನಾಡಿ.

**ಶ್ರೀ ಹೆಚ್.ಡಿ.ರೇವಣ್ಣ :** ಅದನ್ನು cut motion ಕೊಡಬೇಕು ಎಂದು ಮಾಡಿದ್ದೆವು, ನೀವು ಆದೇಶವನ್ನು ಕೊಟ್ಟಮೇಲೆ ನಾವು ಅದಕ್ಕೆ ಮಾತನಾಡುವುದಕ್ಕಾಗುವುದಿಲ್ಲ. ದಯಮಾಡಿ ಕಾವೇರಿ ಬೇಸಿನ್ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಎರಡು SLP ಇರುವಾಗ ಇವತ್ತು ದಯಮಾಡಿ ನಾವು ಈ ಬಗ್ಗೆ ಹೇಳಬೇಕಾಗಿದೆ. ಸರ್, SLP ಎರಡು ಇದೆ. ದಯಮಾಡಿ ನೀವು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

**ಅಧ್ಯಕ್ಷರು :** ಬೇಡ, ಬೇಡ.

**ಶ್ರೀ ಹೆಚ್.ಡಿ.ರೇವಣ್ಣ :** ಸರ್, Leader of the Opposition ಇರಲಿ. ನಾವು ಮೇಜರ್ ಆಗಿ ಕಾವೇರಿ ಬೇಸಿನ್‌ನವರು...

(ಗೊಂದಲ)

**ಅಧ್ಯಕ್ಷರು :** ಆಯಿತು. ಮಾಡೋಣ.

**ಶ್ರೀ ಹೆಚ್.ಡಿ.ರೇವಣ್ಣ :** ನೀವೇ ವಾಪಸ್ಸು ತೆಗೆದುಕೊಳ್ಳಿ. ನಾವು ನಿಮಗೆ credit ಅನ್ನು ಕೊಡುತ್ತೇವೆ. ನನ್ನ ಕ್ಷೇತ್ರದಲ್ಲಿ ಎಸ್‌ಸಿ:ಎಸ್‌ಟಿಯದು ಬೋರ್‌ವೆಲ್ ಅನ್ನು ಕಳೆದ ನಾಲ್ಕು ವರ್ಷಗಳಿಂದಲೂ ಕೊರೆದಿರುವುದಿಲ್ಲ. ಅದು ಯಾರು ಕಂಟ್ರಾಕ್ಟ್‌ದಾರ ಎಂದು ಗೊತ್ತಿಲ್ಲ.

**ಅಧ್ಯಕ್ಷರು :** ಬೇಡ್ರಿ.

**ಶ್ರೀ ಸಿದ್ದರಾಮಯ್ಯ :** ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಉತ್ತರವನ್ನು ಹೇಳುವುದಕ್ಕೂ ಬಿಡದೆ ಇದ್ದರೆ ಹೇಗೇ?

**ಶ್ರೀ ಹೆಚ್.ಡಿ.ರೇವಣ್ಣ :** ನಮಗೆ ಮಾತನಾಡುವುದಕ್ಕೂ ಬಿಡದೆ ಹೋದರೆ ಹೇಗೆ?

**ಅಧ್ಯಕ್ಷರು:** ಯಾರು ಏನು ಬೇಕಾದರೂ ಹೇಳಲಿ, ನಿಮಗೆ ನಾನು ರೇವಣ್ಣ ಎಂದು ಕರೆಯುತ್ತೇವೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :** ಮಾನ್ಯ ರೇವಣ್ಣನವರೆ, ನಿಮ್ಮ ಪಕ್ಷದವರು ಬಹಳ ಜನರು ಮಾತನಾಡಿದ್ದಾರೆ.

**ಶ್ರೀ ಹೆಚ್.ಡಿ.ರೇವಣ್ಣ :** ನಿಮ್ಮ ಕಾಲದಲ್ಲಿ ನಮಗೆ ಅವಕಾಶ ಇಲ್ಲವಲ್ಲಾ?

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :** ನೀನೇ Leader of Opposition ಆಗು ಅಂತಲ್ಲವೇ ನಾನು ಹೇಳಿದ್ದು. ಮಾನ್ಯ ಕುಮಾರಸ್ವಾಮಿಯವರು ಬೇಡಪ್ಪಾ, ನೀನೇ Leader of the Opposition ಆಗು ಅಂತಲ್ಲವೇ ನಾನು ಹೇಳಿದ್ದು.

**ಶ್ರೀ ಹೆಚ್.ಡಿ.ರೇವಣ್ಣ :** ಮಾನ್ಯ ಕುಮಾರಸ್ವಾಮಿಯವರು ಇದ್ದರೂ ಒಂದೇ, ನಾನು ಇದ್ದರೂ ಒಂದೇ. ಮಾನ್ಯ ಸಿದ್ದರಾಮಯ್ಯನವರು ಇದ್ದಾಗಲೂ ಮಾತನಾಡುವುದಕ್ಕೆ ಅವಕಾಶ ಇಲ್ಲವಲ್ಲಾ ಎಂದು ಅಷ್ಟೇ ನಾನು ಹೇಳಿರುವುದು.

**ಶ್ರೀ ಸಿದ್ದರಾಮಯ್ಯ :** ಇನ್ನೊಂದು ಸಾರಿ ಬಜೆಟ್ ಮೇಲೆ budget discussion ಅನ್ನು ನೀವೇ initiate ಮಾಡಿ.

**ಅಧ್ಯಕ್ಷರು :** ಆಯಿತು. ಮಾನ್ಯ ಮುಖ್ಯಮಂತ್ರಿಯವರೆ, ತಾವು ಪ್ರಾರಂಭ ಮಾಡಿ.